**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**
**ಸಿ.ಸಿ.ನಂ.೯೭/೨೦೧೮**

**ಪಿಡಬ್ಲು ೮**
**ಸಿಡಬ್ಲು ೨೩**

ಹೆಸರು : ಶಿವಕುಮಾರ ಸುಬುದ್ದಿ ತುರಮುಂದಿ
ವಯಸ್ಸು : ೨೯ ವರ್ಷ
ಉದ್ಯೋಗ : ಪೋಲಿಸ ಪೇದೆ
ವಾಸ : ಖಾನಾಪೂರ ಪೋಲಿಸ ಠಾಣೆ.

**ದಿನಾಂಕ ೧೨-೦೨-೨೦೧೯ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ನಾನು ದಿನಾಂಕ 21-07-2016 ರಿಂದ ಇಲ್ಲಿಯವರೆಗೆ ಖಾನಾಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 17-10-2017 ರಂದು ಸಂಜೆ 4.30 ಕ್ಕೆ ನಾನು ಠಾಣೆಯಲ್ಲಿದ್ದಾಗ ಚಾಸಾ 32 ರವರು ನನ್ನನ್ನು ಹಾಗೂ ಚಾಸಾ 21, 22, 24 ರಿಂದ 27 ರವರನ್ನು ಕರೆಸಿ ಕಳ್ಳತನದ ವಸ್ತುಗಳನ್ನು ಗೋವಾ ಕಡೆಯಿಂದ ಬೆಳಗಾವಿ ಕಡೆಗೆ ಮಾರಾಟ ಮಾಡಲು ವ್ಯಕ್ತಿಗಳು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದಿದೆ ಎಂದು ತಿಳಿಸಿ, ನಮ್ಮನ್ನು ಜಾಂಬೋಟಿ ಕ್ರಾಸಗೆ ಕರೆದುಕೊಂಡು ಹೋದರು . ಅಲ್ಲಿ ಬರುತ್ತಿದ್ದ ವಾಹನಗಳನ್ನು ಪರಿಶೀಲಿಸುತ್ತಿದ್ದೆವು. ಸಂಜೆ 5.00 ಗಂಟೆಗೆ ಗೋವಾ ಕಡೆಯಿಂದ ವಾಹನ ಸಂಖ್ಯೆ ಜಿಎ-08/ಎಫ-6568 ವೆಂಟೋ ಕಾರ ಬಂದಿದ್ದು, ಚಾಸಾ 32 ಮತ್ತು ನಾವು ಆ ವಾಹನವನ್ನು ನಿಲ್ಲಿಸಿದೆವು . ಆ ವಾಹನದ ಚಾಲಕ 1 ನೇ ಆರೋಪಿ ಇದ್ದು , ಚಾಸಾ 32 ರವರು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು . ಆ ವಾಹನದಲ್ಲಿ 2 ನೇ ಆರೋಪಿಯೂ ಸಹ ಇದ್ದ. ನಂತರ ಆ ವಾಹನವನ್ನು ಪರಿಶೀಲಿಸಿದಾಗ ಆ ವಾಹನದ ಡಿಕ್ಕಿಯಲ್ಲಿ ಒಂದು ಚಾಕಲೇಟ ಬಣ್ಣದ ಫಾಸಟ್ರ್ಯಾಕ ಬ್ಯಾಗ ಇದ್ದು, ಆ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಎರಡು ಸ್ಕ್ರೂ ಡ್ರೈವರ, ಎರಡು ರಾಡ, ಎರಡು ಬಾಕ್ಸ ಪಾನ ಮತ್ತು ಒಂದು ಕಟರ್ ಇದ್ದವು.

ಚಾಸಾ 32 ರವರು ಸ್ಥಳಕ್ಕೆ ಪಂಚರಾದ ಚಾಸಾ 4 ಮತ್ತು 5 ರವರನ್ನು ಹಾಗೂ ಫೋಟೋಗ್ರಾಫರ ಆದ ಚಾಸಾ 19 ರವರನ್ನು ಸ್ಥಳಕ್ಕೆ ಕರೆಸಿದರು . ಆ ಕಾಲಕ್ಕೆ ಹಿಂದಿನಿಂದ ಮಾರುತಿ ಸುಜುಕಿ ಕಾರ ಸಂಖ್ಯೆ ಕೆಎ-27/ಎಂ-4473 ಬಂದಿದ್ದು, ಅದನ್ನು ನಿಲ್ಲಿಸಿದೆವು. ಅದರಲ್ಲಿ ಮಂಜುನಾಥ ರಾಯಕರ ಎಂಬ ಆರೋಪಿ ಇದ್ದ.

ಚಾಸಾ 32 ರವರು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು. ಚಾಸಾ 32 ರವರು ಆ ಎರಡೂ ವಾಹನಗಳನ್ನೂ ಮತ್ತು ಡಿಕ್ಕಿಯಲ್ಲಿ ಸಿಕ್ಕ ಬ್ಯಾಗ ಮತ್ತು ಸಲಕರಣೆಗಳನ್ನು ನಿಪಿ -7 ರಂತೆ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡು, ಸ್ಥಳದಲ್ಲಿ ನಿಪಿ-10 ರಿಂದ ನಿಪಿ-13 ರಂತೆ ಫೊಟೋ ತೆಗೆಸಿದರು. ಸಾಕ್ಷಿಯು ನಿಪಿ-10 ಮತ್ತು ನಿಪಿ-11 ರಲ್ಲಿ ಕಾಣುವ ಎರಡೂ ವಾಹನಗಳನ್ನು ಮತ್ತು ನಿಪಿ-14 ರಲ್ಲಿ ಕಾಣುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ನಾವು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ಕಾರಗಳನ್ನು ತೆಗೆದುಕೊಂಡು ಜಾಂಬೋಟಿ ಹೊರ ಉಪಠಾಣೆಗೆ ಹೋದೆವು. ಉಪಠಾಣೆಯಲ್ಲಿ 1 ಮತ್ತು 2 ನೇ ಆರೋಪಿತರನ್ನು ಚಾಸಾ 32 ರವರು ವಿಚಾರಿಸಿದರು. ಅವರು ತಾವು ಖಾನಾಪೂರ ಮತ್ತು ಇತರ ಹಲವಾರು ಪ್ರದೇಶಗಳಲ್ಲಿ ಪ್ರಕಾಶ ಪಾಟೀಲ ಎಂಬ ವ್ಯಕ್ತಿಯ ಜೊತೆ ಸೇರಿಕೊಂಡು ಕಳ್ಳತನ ಮಾಡಿರುವುದಾಗಿ ತಿಳಿಸಿದರು. ಆ ರೀತಿ ಕಳ್ಳತನ ಮಾಡಿದ ಮಾಲುಗಳನ್ನು ಈ ದಿನ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದುದಾಗಿ ತಿಳಿಸಿದರು. ಆ ಕಳ್ಳತನ ಮಾಡಿದ ವಸ್ತುಗಳನ್ನು ತೋರಿಸುವುದಾಗಿ ತಿಳಿಸಿದರು.

1 ನೇ ಆರೋಪಿಯು ನಮ್ಮ ಸಮಕ್ಷಮ ವೆಂಟೋ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ 42 ಆಭರಣಗಳನ್ನು ತೆಗೆದು ಹಾಜರು ಪಡಿಸಿದನು. ಚಾಸಾ 32 ರವರು ಸ್ಥಳಕ್ಕೆ ಅಕ್ಕಸಾಲಿಗ ಚಾಸಾ 18 ರವರನ್ನು ಕರೆಸಿ ಅವರಿಂದ ಆ ಎಲ್ಲ ಆಭರಣಗಳನ್ನು ಪರಿಶೀಲಿಸಿ , ತೂಕ ಮಾಡಿಸಿದರು. ಚಾಸಾ 32 ರವರು ನಿಪಿ-8 ರಂತೆ ಪಂಚನಾಮೆ ತಯಾರಿಸಿ, ಆ ಆಭರಣಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ನಿಪಿ-15 ಮತ್ತು ನಿಪಿ-16 ರಂತೆ ಫೋಟೊ ತೆಗೆಸಿದರು.

ನಂತರ 2 ನೇ ಆರೋಪಿಯು ನಮ್ಮ ಸಮಕ್ಷಮ ವೆಂಟೋ ಕಾರಿನ ಹಿಂದಿನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ 40 ಆಭರಣಗಳನ್ನು ತೆಗೆದು ಹಾಜರು ಪಡಿಸಿದನು. ಚಾಸಾ 32 ರವರು ಅಕ್ಕಸಾಲಿಗ ಚಾಸಾ 18 ರವರಿಂದ ಆ ಎಲ್ಲ ಆಭರಣಗಳನ್ನು ಪರಿಶೀಲಿಸಿ, ತೂಕ ಮಾಡಿಸಿದರು. ಚಾಸಾ 32 ರವರು ನಿಪಿ-9 ರಂತೆ ಪಂಚನಾಮೆ ತಯಾರಿಸಿ, ಆ ಆಭರಣಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ನಿಪಿ-17 ಮತ್ತು ನಿಪಿ-18 ರಂತೆ ಫೋಟೊ ತೆಗೆಸಿದರು.

ನಂತರ ಮಂಜುನಾಥ ಎಂಬ ಆರೋಪಿಯನ್ನು ಚಾಸಾ 32 ರವರು ವಿಚಾರಿಸಿದಾಗ ಆತನು 1 ಮತ್ತು 2 ನೇ ಆರೋಪಿತರು ಕಳ್ಳತನ ಮಾಡಿದ ಆಭರಣಗಳನ್ನು ತಾನು ಖರೀದಿ ಮಾಡಿರುವುದಾಗಿ ಹಾಗೂ ಆ ಆಭರಣಗಳನ್ನು ಬೇರೆಯವರಿಗೆ ಮಾರಾಟ ಮಾಡಿಸಲು ಸಹಾಯ ಮಾಡುತ್ತಿದ್ದುದಾಗಿ, ಆ ರೀತಿ ಖರೀದಿ ಮಾಡಿದ ಆಭರಣಗಳನ್ನು ತೋರಿಸುವುದಾಗಿ ತಿಳಿಸಿದನು. ನಂತರ ಆತನು ಮಾರುತಿ ಸುಜುಕಿ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಒಂದು ಜೊತೆ ಬೆಳ್ಳಿಯ ಕಾಲು ಚೈನ ಮತ್ತು ಬಂಗಾರದ ಗಂಟನನ್ನು ತೆಗೆದು ಹಾಜರು ಪಡಿಸಿದನು. ಚಾಸಾ 32 ರವರು ಅಕ್ಕಸಾಲಿಗ ಚಾಸಾ 18 ರವರಿಂದ ಆ ಎಲ್ಲ ಆಭರಣಗಳನ್ನು ಪರಿಶೀಲಿಸಿ, ತೂಕ ಮಾಡಿಸಿದರು.

ನಂತರ ಆರೋಪಿತರು ನಾವು ಕಳ್ಳತನ ಮಾಡಲು ಬಳಸಿದ ವಾಹನಗಳನ್ನು ಮತ್ತು ಕಳ್ಳತನ ಮಾಡಿದ ಸ್ಥಳಗಳನ್ನು ತೋರಿಸುವುದಾಗಿ ತಿಳಿಸಿದರು. ದಿನಾಂಕ 18-10-2017 ರಂದು ಬೆಳಿಗ್ಗೆ 8.30 ಕ್ಕೆ ಆರೋಪಿತರು ನಮ್ಮನ್ನು ಖಾನಾಪೂರ ಬಸ ನಿಲ್ದಾಣಕ್ಕೆ ಕರೆದುಕೊಂಡು ಬಂದರು. 1 ನೇ ಆರೋಪಿಯು ಆ ಬಸ ನಿಲ್ದಾಣದ ಉತ್ತರ ಭಾಗದ ಕಂಪೌಂಡ ಬಳಿ ನಿಂತಿದ್ದ ಒಂದು ಪಲ್ಸರ ಬೈಕ ಸಂಖ್ಯೆ ಜಿಎ-07/ಎ-4047 ಬೈಕನ್ನು ತೋರಿಸಿ ಆ ಬೈಕನ್ನು ಬಳಸಿ ಕಳ್ಳತನ ಮಾಡಿರುವುದಾಗಿ ತಿಳಿಸಿದನು. ಚಾಸಾ 32 ರವರು ಪಂಚರಾದ ಚಾಸಾ 6 ಮತ್ತು 7 ರವರನ್ನು ಸ್ಥಳಕ್ಕೆ ಕರೆಸಿ , ಅವರ ಸಮಕ್ಷಮ ನಿಪಿ-19 ರಂತೆ ಪಂಚನಾಮೆ ತಯಾರಿಸಿ, ಆ ಬೈಕನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿ ನಿಪಿ-20 ಮತ್ತು ನಿಪಿ-21 ರಂತೆ ಫೋಟೊ ತೆಗೆಸಿದರು. ಸಾಕ್ಷಿಯು ನಿಪಿ-20 ಮತ್ತು ನಿಪಿ-21 ರಲ್ಲಿ ಕಾಣುವ ಆ ಬೈಕನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಆರೋಪಿತರು ತಾವು ಕಳ್ಳತನ ಮಾಡಿದ ಮನೆಗಳನ್ನು ತೋರಿಸುವುದಾಗಿ ಹೇಳಿದರು. ನಂತರ ಆರೋಪಿತರು ನಮ್ಮನ್ನು ಗರ್ಲಗುಂಜಿ ಗ್ರಾಮದ ಕಲ್ಲಪ್ಪ ಮೆಳಗೆ ಎಂಬುವವರ ಮನೆಗೆ ಕರೆದುಕೊಂಡು ಹೋಗಿ ಅವರ ಮನೆಯನ್ನು ತೋರಿಸಿ, ಇದೇ ಮನೆಯಲ್ಲಿ ಕಳ್ಳತನ ಮಾಡಿದ್ದಾಗಿ ತಿಳಿಸಿದರು. ಚಾಸಾ 32 ರವರು ಸ್ಥಳಕ್ಕೆ ಇಬ್ಬರು ಪಂಚರನ್ನು ಕರೆಸಿ ಅವರ ಸಮಕ್ಷಮ ಪಂಚನಾಮೆ ತಯಾರಿಸಿ , ಸ್ಥಳದಲ್ಲಿ ಫೋಟೊ ತೆಗೆಸಿದರು. ನಂತರ ನಾವೆಲ್ಲರೂ ಠಾಣೆಗೆ ವಾಪಸ ಆದೆವು.

ಸಾಕ್ಷಿಯು ನಿಪಿ-5 ರಲ್ಲಿ ಕಾಣುವ ಆಭರಣಗಳನ್ನು ನೋಡಿ ಗುರುತಿಸಿ , ಆ ದಿನ ಆರೋಪಿತರ ವಶದಿಂದ ಆವುಗಳನ್ನು ಜಪ್ತುಪಡಿಸಿಕೊಂಡಿದ್ದಾಗಿ ನುಡಿದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ

1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿ , ಆ ದಿನ ಈ ಆರೋಪಿತರಿಂದ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದೆವು ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಡಿ ಎಲ ವಕೀಲರಿಂದ**

ಆ ದಿನ ಚಾಸಾ- 32 ರವರ ಜೊತೆ ನಾವು ಒಟ್ಟು 6 ಜನ ಸಿಬ್ಬಂದಿ ಹೋಗಿದ್ದೆವು. ಆ ಕಾಲಕ್ಕೆ ಸಿಬ್ಬಂದಿಯವರೆಲ್ಲಾ ಠಾಣೆಯಲ್ಲಿ ಇದ್ದೆವು . ಉಳಿದ ಸಿಬ್ಬಂದಿಯವರು ಆ ದಿನ ಕರ್ತವ್ಯದಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಆ ಕಾಲಕ್ಕೆ ಅವರು ಠಾಣೆಯಲ್ಲಿದ್ದರು . ಸಿಬ್ಬಂದಿಯವರು ಯಾವ ಕರ್ತವ್ಯದಲ್ಲಿದ್ದರು ಎಂದು ಠಾಣಾ ಡೈರಿಯಲ್ಲಿ ನಮೂದಿಸಿರುತ್ತಾರೆ ಎಂದರೆ ನಿಜ. ಆ ದಿನ ನಾನು ಠಾಣೆಯಲ್ಲಿ ಇದ್ದೆ. ಠಾಣೆಯಲ್ಲಿ ಯಾವ ಕರ್ತವ್ಯದಲ್ಲಿದ್ದೆ ಎಂದು ನನಗೆ ನೆನಪಿಲ್ಲ . ಆ ದಿನ ನಾನು ಠಾಣೆಯಲ್ಲಿಲ್ಲದ ಕಾರಣ ನಾನು ಯಾವ ಕರ್ತವ್ಯದಲ್ಲಿದ್ದೆ ಎಂದು ನನಗೆ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ-24 ರವರು ನಮ್ಮ ವಾಹನದ ಚಾಲಕರಾಗಿದ್ದರು. ಆ ದಿನ ನಾವು ಠಾಣೆ ಬಿಟ್ಟಾಗ ಸಂಜೆ 4.50 ಆಗಿತ್ತು. ನಮ್ಮ ಠಾಣೆಯಿಂದ ಜಾಂಬೋಟಿ ಕ್ರಾಸ್ ಸುಮಾರು 15 ಕಿ.ಮಿ. ಅಂತರದಲ್ಲಿ ಇದೆ. ಆ ದಿನ ಆ ಸ್ಥಳದಲ್ಲಿ 1 ಗಂಟೆ 40 ನಿಮಿಷ ಇದ್ದೆವು. ನಾವು ಜಾಂಬೋಟಿ ಕಡೆಯಿಂದ ಬಂದರೆ ಕ್ರಾಸನಲ್ಲಿ ಒಂದು ರಸ್ತೆ ಬೆಳಗಾವಿ ಕಡೆಗೆ ಇನ್ನೊಂದು ರಸ್ತೆ ಖಾನಾಪೂರದ ಕಡೆಗೆ ಬರುತ್ತದೆ. ಆ ಎರಡು ರಸ್ತೆಗಳು ಪೂರ್ವ ದಿಕ್ಕಿನ ಕಡೆ ಹೋಗುತ್ತವೆ.

ಆ ದಿನ ಎಷ್ಟು ವಾಹನಗಳನ್ನು ಪರಿಶೀಲಿಸಿದ್ದೆವು ಎಂದು ಹೇಳಲು ಆಗುವುದಿಲ್ಲ . ಆ ದಿನ ನಾವು ಸಂಶಯ ಬಂದ ಕಾರಗಳನ್ನು ಮಾತ್ರ ಪರಿಶೀಲಿಸಿದ್ದೆವು. ಆ ರಸ್ತೆ ಪಣಜಿ-ಬೆಳಗಾವಿ ಹೆದ್ದಾರಿ ಎಂದರೆ ನಿಜ. ಆ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಪ್ರತಿದಿನ ಓಡಾಡುತ್ತವೆ ಎಂದರೆ ನಿಜ . ಗೋವಾದಿಂದ ಬರುವಾಗ ಜಾಂಬೋಟಿಗಿಂತ ಮುಂಚೆ ಒಂದು ಅಬಕಾರಿ ಚೆಕ್ ಪೊಸ್ಟ ಇದೆ ಎಂದರೆ ನಿಜ. ಆ ದಿನ ನಾವು ಪರಿಶೀಲಿಸಿದ ಸ್ಥಳದ ಚೆಕ್ಕುಬಂದಿ ಹೇಳಬಲ್ಲೆ . ಪೂರ್ವಕ್ಕೆ ಬೆಳಗಾವಿ ಮತ್ತು ಖಾನಾಪೂರಕ್ಕೆ ಹೋಗುವ ರಸ್ತೆ , ಪಶ್ಚಿಮಕ್ಕೆ ಜಾಂಬೋಟಿಗೆ ಹೋಗುವ ರಸ್ತೆ, ಉತ್ತರಕ್ಕೆ ಸಾವಳಿ ಧಾಬಾ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇತ್ತು . ಆ ದಿನ ನಾವು ಸಾವಳಿ ಧಾಬಾದಿಂದ ಸುಮಾರು 50 ಅಡಿ ಅಂತರದಲ್ಲಿ ಇದ್ದೆವು. ಆ ಧಾಬಾ ಪ್ರತಿದಿನ ಬೆಳಿಗ್ಗೆಯಿಂದ ರಾತ್ರಿ 10 ಗಂಟೆಯವರೆಗೆ ತೆರೆದಿರುತ್ತದೆ.

ಪೋಲಿಸರು ಬಂದಾಗ ಸಾರ್ವಜನಿಕರು ಸಾಮಾನ್ಯವಾಗಿ ಬಂದು ಸೇರುತ್ತಾರೆ ಎಂದರೆ ನಿಜ. ಆದರೆ ಆ ದಿನ ಯಾವುದೇ ಸಾರ್ವಜನಿಕರು ಬಂದಿರಲಿಲ್ಲ. ನಾವು ಎಲ್ಲರೂ ಒಮ್ಮೆಲೆ ಮೊದಲು ವೆಂಟೊ ವಾಹನವನ್ನು ಸುಮಾರು 100 ಮೀ. ಅಂತರದಿಂದ ನೋಡಿದೆವು. ಆಗ ಸಮಯ 7 ಗಂಟೆಗೆ ಒಂದೆರಡು ನಿಮಿಷ ಕಡಿಮೆ ಇತ್ತು. ನಾವು ಆ ವಾಹನವನ್ನು ನೋಡಿ, ಆರೋಪಿತರನ್ನು ವಿಚಾರಿಸಿ, ಆ ಕಾರನ್ನು ಪರಿಶೀಲಿಸಲು ಸುಮಾರು 5 ನಿಮಿಷ ಸಮಯ ಹಿಡಿಯಿತು. ಆಗ ಸಂಜೆ ಸಮಯ 7.05 ಆಗಿತ್ತು. ಆ ನಂತರ ಚಾಸಾ- 32 ರವರು ಪಂಚರನ್ನು ಜಾಂಬೋಟಿಯಿಂದ ಕರೆಸಿದ್ದರು. ಅವರನ್ನು ಎಲ್ಲಿಂದ ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ನಿಂತ ಸ್ಥಳದಿಂದ ಜಾಂಬೋಟಿ ಗ್ರಾಮಕ್ಕೆ ಸುಮಾರು ಅರ್ಧ ಕಿ.ಮಿ. ಅಂತರ ಇದೆ. ನಾವು ಜೀಪಿನಲ್ಲಿ ಹೋಗಿ ಕರೆದುಕೊಂಡು ಬರಲು 2 ನಿಮಿಷ ಸಮಯ ಬೇಕಾಗುತ್ತದೆ. ಸಾಮಾನ್ಯವಾಗಿ ನಡೆದುಕೊಂಡು ಹೋದರೆ 5 ನಿಮಿಷದಲ್ಲಿ ತಲುಪಬಹುದು.

ಚಾಸಾ- 32 ನನ್ನ ಮೇಲಾಧಿಕಾರಿ ಎಂದರೆ ನಿಜ . ಅವರು ಹೇಳಿದ್ದನ್ನು ನಾವು ಕೇಳಬೇಕಾಗುತ್ತದೆ ಎಂದರೆ ನಿಜ. ಆರೋಪಿತರು ಸಿಕ್ಕಾಗ ಮೊದಲು ಅವರನ್ನು ಬಂಧಿಸಿ ನಂತರ ಪಂಚನಾಮೆ ಮಾಡಿದ್ದೆವು . ನಾನು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಮತ್ತು ಪಂಚರ ನಡುವೆ ಆ ದಿನ ಯಾವುದೇ ಮಾತುಕತೆ ಆಗಿಲ್ಲ. ಆದರೆ ಚಾಸಾ-32 ಮತ್ತು ಪಂಚರ ನಡುವೆ ಮಾತುಕತೆ ಆಗಿತ್ತು. ಆ ದಿನ ಪಂಚನಾಮೆಗಳನ್ನು ಬರೆಯಲು ಚಾಸಾ-32 ರವರು ಮಾಹಿತಿ ಕೊಟ್ಟಿದ್ದರು. ಆ ದಿನ ಪಂಚನಾಮೆಗಳನ್ನು ಯಾರು ಬರೆದರು ಎಂದು ನೆನಪಿಲ್ಲ. ಆ ದಿನ ಪಂಚರನ್ನು ವಿಚಾರಿಸಿ ಚಾಸಾ - 32 ರವರು ಪಂಚನಾಮೆ ಬರೆಯಲು ಮಾಹಿತಿ ಕೊಟ್ಟರು. ಪಂಚರು ಯಾವುದೇ ಮಾಹಿತಿ ಕೊಟ್ಟಿಲ್ಲ. ಚಾಸಾ-19 ಜಾಂಬೋಟಿಯವನು ಚಾಸಾ-18 ಖಾನಾಪೂರದವನು. ಅವರನ್ನು ಚಾಸಾ-32 ರವರು ಕರೆಸಿದ್ದರು. ಅವರನ್ನು ಎಲ್ಲಿಂದ ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ.

ಆ ದಿನ ಉಪಠಾಣೆಯಲ್ಲಿ ಒಟ್ಟು 3 ಪಂಚನಾಮೆಗಳನ್ನು ಮಾಡಿದ್ದೆವು. ಆ 3 ಪಂಚನಾಮೆಗಳನ್ನು ತಯಾರಿಸಲು ಚಾಸಾ- 32 ರವರು ಮಾಹಿತಿ ಕೊಟ್ಟಿದ್ದರು. ಆ 3 ಪಂಚನಾಮೆಗಳನ್ನು ತಯಾರಿಸಿದಾಗ ಬೆಳಗಿನ ಜಾವ 2 ಗಂಟೆ ಆಗಿತ್ತು. ಆ ದಿನ ನಾವು ಜಾಂಬೋಟಿಯನ್ನು ಬಿಟ್ಟಾಗ ಬೆಳಗ್ಗೆ 7.45 ಆಗಿತ್ತು. ಖಾನಾಪೂರಕ್ಕೆ ಬಂದಾಗ ಸುಮಾರು 8.20 ಆಗಿತ್ತು. ಆಗ ಚಾಸಾ- 32 ರವರು ಪಂಚರನ್ನು ಎಲ್ಲಿಂದ ಕರೆಸಿದರು ಎಂದು ನನಗೆ ಗೊತ್ತಿಲ್ಲ. ಈ ಪಂಚನಾಮೆಯನ್ನು ತಯಾರಿಸಲು ಚಾಸಾ-32 ರವರು ಮಾಹಿತಿ ಕೊಟ್ಟಿದ್ದರು. ಆ

ಪಂಚನಾಮೆಯನ್ನು ಚಾಸಾ -32 ರವರೇ ಲ್ಯಾಪಟಾಪನಲ್ಲಿ ಟೈಪ ಮಾಡಿದ್ದರು . ಆ ದಿನ ಯಾವ ಆರೋಪಿಯಿಂದ ನಿಖರವಾಗಿ ಯಾವ ಯಾವ ಆಭರಣಗಳನ್ನು ಜಪ್ತುಪಡಿಸಿಕೊಳ್ಳಲಾಯಿತು ಎಂದು ಹೇಳಲು ಆಗುವುದಿಲ್ಲ. ಆದರೆ ಆಭರಣ ಯಾವುದು ಎಂದು ಹೇಳಿದರೆ ಅದನ್ನು ಯಾರಿಂದ ಜಪ್ತುಪಡಿಸಿಕೊಳ್ಳಲಾಯಿತು ಎಂದು ಹೇಳಬಲ್ಲೆ.

ಆ ದಿನ ನನ್ನ ಸಮಕ್ಷಮ ಚಾಸಾ-32 ರವರು ಯಾವುದೇ ಆಭರಣಗಳನ್ನು ಜಪ್ತುಪಸಿಕೊಂಡಿಲ್ಲ, ಆ ಕಾರಣಕ್ಕಾಗಿ ನನಗೆ ಹೇಳಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ-32 ರವರಿಗೆ ಯಾವುದೇ ಮಾಹಿತಿ ಬಂದಿಲ್ಲ, ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಚಾಸಾ-32 ರವರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ, ಯಾವುದೇ ಪೋಟೊ ತೆಗೆಸಿಲ್ಲ, ಯಾವುದೇ ಅಕ್ಕಸಾಲಿಗನಿಂದ ಆಭರಣಗಳನ್ನು ಪರಿಶೀಲಿಸಿಲ್ಲ, ಆರೋಪಿತರು ಯಾವುದೇ ಆಭರಣಗಳನ್ನು ಮತ್ತು ನಿಪಿ -14 ರಲ್ಲಿ ಕಾಣುವ ವಸ್ತುಗಳನ್ನು ಹಾಜರು ಪಡಿಸಿಲ್ಲ, ಚಾಸಾ-32 ರವರು ಯಾವುದೇ ಆಭರಣಗಳನ್ನು ಮತ್ತು ನಿಪಿ -14 ರಲ್ಲಿ ಕಾಣುವ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ-32 ರವರು ನನ್ನ ಮೇಲಾಧಿಕಾರಿಯಾದ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಎಲ್ಲ ಪಂಚನಾಮೆಗಳನ್ನು ಮತ್ತು ಪೋಟೊಗಳನ್ನು ನಾವು ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ಮುದ್ದೆಮಾಲುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

***( ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)***

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.೯೭/೨೦೧೮**

**ಪಿಡಬ್ಲು ೭**

**ಸಿಡಬ್ಲು ೧೯**

ಹೆಸರು : ರವೀಂದ್ರ ಸುರೇಶ ಪಿಳನಕರ

ವಯಸ್ಸು : ೨೮ ವರ್ಷ

ಉದ್ಯೋಗ : ಫೋಟೋಗ್ರಾಫರ

ವಾಸ : ಜಾಂಬೋಟಿ ಗ್ರಾಮ, ಖಾನಾಪೂರ.

**ದಿನಾಂಕ ೧೩-೧೧-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ **4, 5** ಮತ್ತು **15** ರವರು ಗೊತ್ತು. ನಾನು ಕಳೆದ 8 ವರ್ಷಗಳಿಂದ ಫೋಟೋಗ್ರಾಫರನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 17-10-2017 ರಂದು ಸಂಜೆ 7.00 ಗಂಟೆಗೆ ನನ್ನನ್ನು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸಗೆ ಕರೆಸಿದ್ದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು, ಒಂದು ಕಾರ ಮತ್ತು ಮಾರುತಿ ವ್ಯಾನ ಇದ್ದವು. ಪೋಲಿಸರು ಕಾರಿನ ಡಿಕ್ಕಿಯನ್ನು ಪರಿಶೀಲಿಸಿದಾಗ, ಅಲ್ಲಿ ಒಂದು ಫಾಸ್ಟ್ರ್ಯಾಕ ಕಂಪನಿಯ ಬ್ಯಾಗ ಇದ್ದು, ಅದರಲ್ಲಿ ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್ ಮತ್ತು ಎರಡು ಪಾನಾ ಇದ್ದವು. ಪೋಲಿಸರು ಅವುಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ನಿಪಿ-7 ರಂತೆ ಪಂಚನಾಮೆ ತಯಾರಿಸಿದರು. ಸಾಕ್ಷಿಯು ನಿಪಿ-14 ರಲ್ಲಿ ಕಾಣುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-10 ಮತ್ತು 11 ರಲ್ಲಿ ಕಾಣುವ ಕಾರಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಸ್ಥಳದಲ್ಲಿ ನಿಪಿ-10 ರಿಂದ 13 ರಂತೆ ಫೋಟೋಗಳನ್ನು ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ಕಾರಗಳನ್ನು ತೆಗೆದುಕೊಂಡು, ನಮ್ಮನ್ನು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಪೋಲಿಸರು 1 ಮತ್ತು 2 ನೇ ಆರೋಪಿತರನ್ನು ನನ್ನ ಸಮಕ್ಷಮ ವಿಚಾರಿದಾಗ ಅವರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದ್ದರು ಎಂದು ನಮಗೆ ತಿಳಿಸಿದ್ದರು. 1ನೇ ಆರೋಪಿಯು ತಾನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಆಭರಣಗಳನ್ನು ಹಾಜರು ಪಡಿಸುತ್ತೇನೆಂದು ಹೇಳಿ ನನ್ನ ಸಮಕ್ಷಮ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ 42 ಆಭರಣಗಳನ್ನು ತೆಗೆದು ಹಾಜರು ಪಡಿಸಿದನು. ಪೋಲಿಸರು ಸ್ಥಳದಲ್ಲಿ ನಿಪಿ-8 ರಂತೆ ಪಂಚನಾಮೆ

ತಯಾರಿಸಿ, ಅವುಗಳನ್ನು ತೆಗೆದುಕೊಂಡರು. ನಾನು ಸ್ಥಳದಲ್ಲಿ ನಿಪಿ-15 ಮತ್ತು 16 ರಂತೆ ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ . ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-23 ಎಂದು ಗುರುತಿಸಲಾಯಿತು.

ನಂತರ ಸದರಿ ಉಪಠಾಣೆಯಲ್ಲಿ 2 ನೇ ಆರೋಪಿಯು ನನ್ನ ಸಮಕ್ಷಮ ಕಾರಿನ ಚಾಲಕನ ಹಿಂದಿನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಹಲವಾರು ಆಭರಣಗಳನ್ನು ತೆಗೆದು ಹಾಜರು ಪಡಿಸಿದನು . ಪೋಲಿಸರು ಸ್ಥಳದಲ್ಲಿ ನಿಪಿ-9 ರಂತೆ ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು . ನಾನು ಸ್ಥಳದಲ್ಲಿ ನಿಪಿ-17 ಮತ್ತು 18 ರಂತೆ ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.

ನಂತರ ಸದರಿ ಉಪಠಾಣೆಯಲ್ಲಿ ಇನ್ನೊಬ್ಬ ಆರೋಪಿಯು ನನ್ನ ಸಮಕ್ಷಮ ಮಾರುತಿ ವ್ಯಾನನಲ್ಲಿದ್ದ ಒಂದು ಬಂಗಾರದ ಗಂಟನ ಮತ್ತು ಬೆಳ್ಳಿಯ ಕಾಲು ಚೈನುಗಳನ್ನು ತೆಗೆದು ಹಾಜರು ಪಡಿಸಿದನು . ಪೋಲಿಸರು ಸ್ಥಳದಲ್ಲಿ ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದಿದ್ದರು . ನಾನು ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ.

ನಾನು ಫೋಟೋಗಳನ್ನು ತೆಗೆದ ಬಗ್ಗೆ ಪೋಲಿಸರಿಗೆ ಪ್ರಮಾಣ ಪತ್ರವನ್ನು ಕೊಟ್ಟಿದ್ದೆನು . (ಸಸಅ ರವರು ಸಿ.ಸಿ.1728/2017 ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಪ್ರಮಾಣ ಪತ್ರವನ್ನು ಸಾಕ್ಷಿಗೆ ತೋರಿಸಲು ಹಾಗೂ ಅದರ ದೃಢೀಕೃತ ಪ್ರತಿಯನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು , ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಕೊಟ್ಟ ಪ್ರಮಾಣ ಪತ್ರವನ್ನು ತನಿಖಾಧಿಕಾರಿಯು ಸಿ.ಸಿ.1728/2017 ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪ್ರಮಾಣ ಪತ್ರವು ಅವಶ್ಯಕವಾಗಿರುವ ಕಾರಣ ಆ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು . ಸಾಕ್ಷಿಯು ಆ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಪ್ರಮಾಣ ಪತ್ರದೊಂದಿಗೆ ಈ ಪ್ರಕರಣದಲ್ಲಿ ಹಾಜರು ಪಡಿಸಿದ ಅದರ ದೃಢೀಕೃತ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಸರಿ ಇದೆ .) ಸದರಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ-25 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿ ಕಾಣುವ ಆಭರಣಗಳನ್ನು ನೋಡಿ ಗುರುತಿಸಿ ಆ ದಿನ ನಾನು ಫೋಟೋ ತೆಗೆದ ಆಭರಣಗಳಲ್ಲಿ ಇವುಗಳೂ ಸಹ ಇದ್ದವು ಎಂದು ನುಡಿದಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿ, ಆ ದಿನ ಈ ಆರೋಪಿತರಿಂದ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರು ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ – ಶ್ರೀ. ಎ ಡಿ ಎಲ ವಕೀಲರಿಂದ**

ನಾನು ನೊಂದಾಯಿತ ಫೊಟೊಗ್ರಾಫರ ಅಲ್ಲ ಎಂದರೆ ನಿಜ. ನಾನು ಈ ಬಗ್ಗೆ ಯಾವುದೇ ವಿಶೇಷ ತರಬೇತಿ ಅಥವಾ ವಿದ್ಯಾಭ್ಯಾಸವನ್ನು ಪಡೆದಿಲ್ಲ ಎಂದರೆ ನಿಜ. ನಾನು ಪೋಲಿಸರ ಬಳಿ ಯಾವುದೇ ಹೇಳಿಕೆ ಕೊಟ್ಟಿಲ್ಲ. ನಾನು 8 ವರ್ಷಗಳಿಂದ ಫೋಟೊಗ್ರಾಫರನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಬಾಯಿಮಾತಿನಲ್ಲಿ ಈ ದಿನ ಹೇಳುತ್ತಿದ್ದೇನೆ. ಫೋಟೊ ತೆಗೆಯಲು ಪಂಚನಾಮೆಗೆ ಬರುವಂತೆ ಪೋಲಿಸರು ನನಗೆ ನೋಟೀಸ ಕೊಟ್ಟಿರಲಿಲ್ಲ. ದೇವಮಾನೆ ಎಂಬ ಪೋಲಿಸರು ನನಗೆ ಫೋನ ಮಾಡಿ ಕರೆಸಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಘಟನೆಗಳು ನಡೆಯುವ ಕಾಲಕ್ಕೆ ದೇವಮಾನೆ ಎಂಬ ಪೋಲಿಸ ನನ್ನ ಜೊತೆ ಇದ್ದರು. ಆ ದಿನ ಪಂಚನಾಮೆಗಳನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗಳನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆ ಪಂಚನಾಮೆಗಳನ್ನು ಲ್ಯಾಪ ಟಾಪನಲ್ಲಿ ತಯಾರಿಸಿದ್ದರು. ಯಾರು ಟೈಪ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆಗ ಅಲ್ಲಿ ಪೋಲಿಸರು ಮತ್ತು 25-30 ಜನ ಸಾರ್ವಜನಿಕರು ಸೇರಿದ್ದರು. ಆ ದಿನ ಹಾಜರಿದ್ದ ಸಾರ್ವಜನಿಕರ ಮತ್ತು ಪೋಲಿಸರ ಹೆಸರುಗಳು ನನಗೆ ಗೊತ್ತಿಲ್ಲ. ದೇವಮಾನೆ ಒಬ್ಬರ ಹೆಸರು ಗೊತ್ತಿದೆ. ನಿಪಿ-14 ರಲ್ಲಿ ಕಾಣುವ ರೀತಿಯ ವಸ್ತುಗಳು ಅಟೋಮೊಬೈಲ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರು ಎಂದು ತೋರಿಸಲು ಅವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ನಿಜ. ಆ ದಿನ ನೋಡಿದ ಕಾರ ಮತ್ತು ವ್ಯಾನಿನ ಸಂಖ್ಯೆಗಳು ಮತ್ತು ಅವುಗಳ ಮಾಲಿಕರ ಹೆಸರುಗಳು ನನಗೆ ಗೊತ್ತಿಲ್ಲ. ನನಗೆ ಆರೋಪಿತರ ಹೆಸರು ಮತ್ತು ವಿಳಾಸಗಳು ಗೊತ್ತಿಲ್ಲ. ಆ ದಿನ ಆರೋಪಿತರ ಮತ್ತು ಪೋಲಿಸರ ಮಧ್ಯೆ ಏನು ಮಾತುಕತೆ ನಡೆಯಿತು ಎಂದು ನನಗೆ ಗೊತ್ತಿಲ್ಲ. ಆರೋಪಿತರು ನನ್ನನ್ನು ಆ ದಿನ ಮಾತನಾಡಿಸಲಿಲ್ಲ ಮತ್ತು ನನಗೆ ಯಾವುದೇ ವಿಷಯವನ್ನು ಹೇಳಿಲ್ಲ. ಆ ದಿನ ನಿಖರವಾಗಿ ಯಾವ ಯಾವ ಆಭರಣಗಳನ್ನು ನೋಡಿದ್ದೆ ಎಂದು ಹೇಳಲು ಆಗುವುದಿಲ್ಲ. ಆ ದಿನ ಒಟ್ಟು ಎಷ್ಟು ಪಂಚನಾಮೆಗಳನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಎಷ್ಟು ಸಹಿ ಮಾಡಿದ್ದೆ ಎಂದು ನನಗೆ ಗೊತ್ತಿಲ್ಲ. ಆ ದಿನ ವಾಹನಗಳ ಡಿಕ್ಕಿಯಿಂದ ಯಾರು ನಿಪಿ-14 ರಲ್ಲಿ ಕಾಣುವ ವಸ್ತುಗಳನ್ನು ತೆಗೆದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಕಾರಿನ ಚಾಲಕನ ಸೀಟಿನ ಅಡಿಯಿಂದ ಯಾವ ಆರೋಪಿ ಆಭರಣಗಳನ್ನು ತೆಗೆದು ಕೊಟ್ಟನು ಎಂದು ನಿಖರವಾಗಿ ಹೇಳಲು ಆಗವುದಿಲ್ಲ. ಆ ದಿನ ನಿಖರವಗಾಗಿ ಎಷ್ಟು ಫೋಟೊಗಳನ್ನು ತಗೆದೆ ಎಂದು ಹೇಳಲು ಆಗವುದಿಲ್ಲ. ಫೋಟೊ ತೆಗೆದ ಬಗ್ಗೆ ನಾನು ಬಿಲ್ಲನ್ನು ಪೋಲಿಸರಿಗೆ ಕೊಟ್ಟಿರಲಿಲ್ಲ. ಆದರೆ ಅವರು ಅದರ ಹಣವನ್ನು ನನಗೆ ಕೊಟ್ಟಿದ್ದರು. ನಾನು ಫೊಟೊ ತಗೆದಿಲ್ಲ ಆ ಕಾರಣಕ್ಕಾಗಿ ಬಿಲ್ಲನ್ನು ಕೊಟ್ಟಿಲ್ಲ ಮತ್ತು ಪೋಲಿಸರು ನನಗೆ ಹಣವನ್ನು ಸಹ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಯಾವುದೇ ವಿಡಿಯೋ ತೆಗೆದಿಲ್ಲ. ನಿಪಿ-25 ರಂತೆ ಪ್ರಮಾಣ ಪತ್ರವನ್ನು ನೀಡಲು ನನಗೆ ಅಧಿಕಾರ ಇಲ್ಲ, ವಿಶೇಷ ತರಬೇತಿ ಪಡೆದ ವ್ಯಕ್ತಿ ಮಾತ್ರ ನೀಡಬೇಕು ಎಂದರೆ ಸರಿಯಲ್ಲ. ನಿಪಿ-25 ರಂತೆ ಪ್ರಮಾಣ ಪತ್ರವನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಫೋಟೊಗಳನ್ನು

ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ , ಯಾವುದೇ ವಸ್ತುಗಳನ್ನು, ಆಭರಣಗಳನ್ನು ಮತ್ತು ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ-14 ರಲ್ಲಿ ಕಾಣುವ ವಸ್ತುಗಳಿಗೂ , ಬಂಗಾರ ಮತ್ತು ಬೆಳ್ಳಿಯ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಪೋಲಿಸರು ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

***( ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)***

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.೯೭/೨೦೧೮**

**ಪಿಡಬ್ಲು ೩**

**ಸಿಡಬ್ಲು ೬**

ಹೆಸರು : ಜಾಕೀರ ಮೆಹಬೂಬಸಾಬ ಬಡೇಗಾರ

ವಯಸ್ಸು : ೨೭ ವರ್ಷ

ಉದ್ಯೋಗ : ವ್ಯವಹಾರ

ವಾಸ : ಜಳಕಾ ಗಲ್ಲಿ, ಖಾನಾಪೂರ.

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ **೭** ಗೊತ್ತು. **(**ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಮೂಲ ಪಂಚನಾಮೆಯನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. **ಈ ಪ್ರಕರಣದಲ್ಲಿ ಜಪ್ತು ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು** ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಯು ಅವಶ್ಯಕವಾಗಿರುವ ಕಾರಣ ಆ ಪಂಚನಾಮೆಯನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅದನ್ನು ನಿಪಿ-೧೯ ಎಂದು ಗುರುತಿಸಲಾಯಿತು.

ದಿನಾಂಕ **೧೮-೧೦-೨೦೧೭** ರಂದು ಬೆಳಿಗ್ಗೆ **೭.೦೦** ಗಂಟೆಗೆ ನಾನು ಮತ್ತು ಚಾಸಾ **೭** ರವರು ಖಾನಾಪೂರ ಪೋಲಿಸ ಠಾಣೆಯ ಎದುರು ವಾಕಿಂಗ ಹೋಗಿದ್ದೆವು. ಆಗ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದರು. ಆಗ ಠಾಣೆಯಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಆಗ ಪೋಲಿಸರು ಆ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ನಮ್ಮನ್ನು ಕರೆದುಕೊಂಡು ಹೋದರೆ ಬೈಕಗಳನ್ನು ತೋರಿಸುತ್ತೇವೆ ಎಂದು ಹೇಳಿದರು. ಆಗ ಪೋಲಿಸ ವಾಹನದಲ್ಲಿ ನಾನು, ಚಾಸಾ **೭**, ಪೋಲಿಸರು ಮತ್ತು ಇಬ್ಬರು ಆರೋಪಿತರು ಖಾನಾಪೂರ ಬಸ್ ಡಿಪೋಗೆ ಹೋದೆವು. ಬಸ್ ನಿಲ್ದಾಣದ ಬಳಿ ಇರುವ ಒಂದು ಮರದ ಬಳಿ ಒಂದು ಬಜಾಜ ಪಲ್ಸರ ಬೈಕ ಸಂಖ್ಯೆ ಜಿಎ**-೦೭/**ಎ**-೪೦೪೩** ನಿಂತಿತ್ತು. ಆ ಇಬ್ಬರು ಆರೋಪಿತರು ಆ ಬೈಕನ್ನು ತೋರಿಸಿದರು. ಸ್ಥಳದಲ್ಲಿ ಪೋಲಿಸರು ಎರಡು ಫೋಟೊಗಳನ್ನು ತೆಗೆದರು. ಸಾಕ್ಷಿಯು ಸದರಿ

ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-೨೦ ಮತ್ತು ನಿಪಿ-೨೧ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೨೦ ಮತ್ತು ನಿಪಿ-೨೧ ರಲ್ಲಿ ಕಾಣುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ನಂತರ ಪೋಲಿಸರು ಸ್ಥಳದಲ್ಲಿ ತಮ್ಮ ಲ್ಯಾಪ ಟಾಪ್ ನಲ್ಲಿ ಪಂಚನಾಮೆ ತಯಾರಿಸಿ ನಮ್ಮ ಸಹಿ ಪಡೆದರು. ಆ ವಾಹನವನ್ನು ಮತ್ತು ಆರೋಪಿತರನ್ನು ವಾಪಸ ಠಾಣೆಗೆ ಕರೆದುಕೊಂಡು ಹೋದರು. ಆ ವಾಹನವನ್ನು ಅವರು ಯಾವ ಕಾರಣಕ್ಕೆ ಬಳಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ಇಬ್ಬರು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ಹಾಜರಿರುವುದಿಲ್ಲ. ( ೧ ಮತ್ತು ೨ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಪೋಲಿಸರು ಹಾಜರು ಪಡಿಸಿರುವುದಿಲ್ಲ. ೧ ಮತ್ತು ೨ ನೇ ಆರೋಪಿತರ ಪರ ವಕೀಲರು ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ನಾವು ಠಾಣೆಗೆ ಹೋದಾಗ ಪೋಲಿಸರು ಆರೋಪಿತರನ್ನು ವಿಚಾರಿಸಿದ್ದು, ಆರೋಪಿತರು ತಾವು ಕಳ್ಳತನ ಮಾಡಲು ಬಳಸಿದ ವಾಹನವನ್ನು ತೋರಿಸುತ್ತೇವೆ ಎಂದು ಹೇಳಿದ್ದರು ಎಂದರೆ ನಿಜ. ಪಂಚನಾಮೆ ಕಾಲಕ್ಕೆ ೧ ಮತ್ತು ೨ನೇ ಆರೋಪಿತರು ತಾವು ಇದೇ ಬೈಕನ್ನು ಬಳಸಿ ಕಳ್ಳತನ ಮಾಡುತ್ತಿದ್ದೆವು ಎಂದು ಹೇಳಿದ್ದರು ಎಂದರೆ ನಿಜ.

ಪಾಟೀ ಸವಾಲುಃ ಶ್ರೀ ಎ ಡಿ ಎಲ ವಕೀಲರಿಂದ

ನಾನು ಮೊಬೈಲ ವ್ಯವಹಾರ ಮಡುತ್ತೇನೆ. ಬೆಳಿಗ್ಗೆ ೯.೦೦ ರಿಂದ ರಾತ್ರಿ ೧೦.೦೦ ರವರೆಗೆ ನಾನು ಮೊಬೈಲ ಅಂಗಡಿಯಲ್ಲಿ ಇರುತ್ತೇನೆ. ನನ್ನ ಅಂಗಡಿಯ ವ್ಯಾಪಾರ ಚೆನ್ನಾಗಿದೆ. ನಾನು ಪ್ರತಿ ದಿನ ಅಂಗಡಿಯಲ್ಲಿ ಕುಳಿತು ಎಲ್ಲ ಗಿರಾಕಿಗಳೊಂದಿಗೆ ಮಾತನಾಡಿ ವ್ಯವಹಾರ ಮಾಡುತ್ತೇನೆ. ನನ್ನ ಅಂಗಡಿಗೆ ಬೇಕಾಗುವ ಎಲ್ಲ ವಸ್ತುಗಳನ್ನು ಖರೀದಿಸುವ ಮತ್ತು ವಿಲೇವಾರಿ ಮಾಡುವ ಕೆಲಸಗಳನ್ನು ನಾನೇ ಮಾಡುತ್ತೇನೆ. ಆ ದಿನ ನಮ್ಮನ್ನು ಕರೆದ ಪೋಲಿಸರ ಹೆಸರು ಮತ್ತು ಹುದ್ದೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾವು ಹೋದಾಗ ಆರೋಪಿತರು ಎಲ್ಲಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಆರೋಪಿತರ ಹೆಸರು, ವಿಳಾಸ ಗೊತ್ತಿಲ್ಲ. ನಾನು ಅವರ ಹೆಸರು ವಿಳಾಸಗಳನ್ನು ವಿಚಾರಿಸಿಲ್ಲ. ನಾವು ಠಾಣೆಯನ್ನು ಬಿಡುವ ಮುನ್ನ ನಮ್ಮ ಮತ್ತು ಆರೋಪಿತರ ಹಾಗೂ ಪೋಲಿಸರ ಮಧ್ಯೆ

ಯಾವುದೇ ಸಂಭಾಷಣೆ ಆಗಿಲ್ಲ. ಆ ದಿನ ನಮ್ಮ ಜೊತೆ ಬಂದ ಪೋಲಿಸರ ಹೆಸರು ಮತ್ತು ಹುದ್ದೆ ನನಗೆ ಹೇಳಲು ಆಗುವುದಿಲ್ಲ. ಆ ದಿನ ನಾವು ಟಾಟಾ ಸುಮೊ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದೆವು. ಆ ವಾಹನದ ಸಂಖ್ಯೆ ಮತ್ತು ಅದರ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಆ ದಿನ ಬೆಳಿಗ್ಗೆ ೭.೩೦ ಕ್ಕೆ ಠಾಣೆಯನ್ನು ಬಿಟ್ಟು ೧೦ ನಿಮಿಷದಲ್ಲಿ ಬಸ್ ನಿಲ್ದಾಣಕ್ಕೆ ಬಂದಿದ್ದೆವು. ಠಾಣೆಯನ್ನು ಬಿಟ್ಟು ಬಸ್ ನಿಲ್ದಾಣಕ್ಕೆ ಬರುವವರೆಗೆ ನಮ್ಮ ಮತ್ತು ಆರೋಪಿತರ ಹಾಗೂ ಪೋಲಿಸರ ಮಧ್ಯೆ ಯಾವುದೇ ಮಾತುಕತೆ ನಡೆಯಲಿಲ್ಲ. ಆ ದಿನ ಸುಮೊ ವಾಹನದ ಚಾಲಕ ನೇರವಾಗಿ ವಾಹನವನ್ನು ಬಸ ನಿಲ್ದಾಣಕ್ಕೆ ತೆಗೆದುಕೊಂಡು ಬಂದಿದ್ದ ಎಂದರೆ ನಿಜ. ಆದರೆ ಠಾಣೆಯಲ್ಲಿ ಆ ರೋಪಿತರು ಬಸ ನಿಲ್ದಾಣಕ್ಕೆ ಹೋಗುವಂತೆ ಹೇಳಿದ್ದರು. ಆ ರೀತಿ ಯಾವ ಆರೋಪಿ ಹೇಳಿದ್ದ ಮತ್ತು ಆತನ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಖಾನಾಪೂರ ಬಸ ನಿಲ್ದಾಣ ಜನನಿಬಿಡ ಪ್ರದೇಶ ಎಂದರೆ ನಿಜ. ಆ ಬಸ್ ನಿಲ್ದಾಣಕ್ಕೆ ಎರಡು ಕಡೆಗಳಿಂದ ಪ್ರವೇಶ ದ್ವಾರ ಇದ್ದು ನಾವು ಬೆಳಗಾವಿಕಡೆಗೆ ಇರುವ ದ್ವಾರದಿಂದ ಒಳಗೆ ಹೋಗಿದ್ದೆವು. ಆ ಸ್ಥಳದಲ್ಲಿ ಸುಮಾರು ೩೦-೪೦ ದ್ವಿಚಕ್ರ ವಾಹನಗಳು ಇದ್ದವು. ಅವುಗಳ ಸಂಖ್ಯೆ ಹೇಳಲು ಆಗವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಾಹನದ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ಆ ದಿನ ಸಿಂಗಲ್ ಸ್ಟ್ಯಾಂಡ ಅಥವಾ ಡಬಲ್ ಸ್ಟ್ಯಾಂಡ ಹಾಕಿ ಆ ಬೈಕನ್ನು ನಿಲ್ಲಿಸಿದ್ದರೋ ಎಂದು ನನಗೆ ಗೊತ್ತಿಲ್ಲ. ಆ ವಾಹನದ ಹ್ಯಾಂಡಲ ಲಾಕ್ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಅದು ಚಾಲ್ತಿ ಸ್ಥಿತಿಯಲ್ಲಿತ್ತೋ ಇಲ್ಲವೋ ಎಂದು ನಾವು ನೋಡಲಿಲ್ಲ.

ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ನಾವು ಮಾಹಿತಿ ಕೊಟ್ಟಿಲ್ಲ. ಪಂಚನಾಮೆಯನ್ನು ಯಾರು ತಯಾರಿಸಿದರು, ಯಾರು ಟೈಪ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾವು ಡಿಪೊದಲ್ಲಿ ಸಹಿ ಮಾಡಿದ್ದೆವು. ಆ ದಿನ ಪಂಚನಾಮೆಯನ್ನು ಸುಮೊ ವಾಹನದಲ್ಲಿ ಕುಳಿತು ತಯಾರಿಸಿದ್ದರು. ಆ ದಿನ ಫೋಟೊ ತೆಗೆದ ಛಾಯಗ್ರಾಹಕನ ಹೆಸರು ಗೊತ್ತಿಲ್ಲ. ಪೋಲಿಸರು ಹೇಳಿದಂತೆ ಆತನು ಫೋಟೊ ತೆಗೆದಿದ್ದನು. ಆ ದಿನ ಗಣೇಶ ಎಂಬ ಆರೋಪಿಯು ಆ ವಾಹನವನ್ನು ತೋರಿಸಿದ್ದನು. ಆಗ ಸ್ಥಳದಲ್ಲಿ ೨೫-೩೦ ಜನ ಸೇರಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಾಹನವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಪೋಲಿಸರು ಫೋಟೊಗಳನ್ನು ತಮಗೆ ಅನುಕೂಲ ಆಗುವಂತೆ ತೆಗೆಯಿಸಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಆ ದಿನ ನಾನು ನೋಡಿದ ವಾಹನದ ಸಂಖ್ಯೆ ಜಿಎ-೦೭/೪೩೪೦ ಆಗಿತ್ತು. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**
**ಸಿ.ಸಿ.ನಂ.೯೭/೨೦೧೮**

**ಪಿಡಬ್ಲ್ಯು ೬**
**ಸಿಡಬ್ಲ್ಯು ೭**

ಹೆಸರು : ತುಕಾರಾಮ ಸಿದ್ದಪ್ಪ ಕೋಲಕಾರ
ವಯಸ್ಸು : ೨೬ ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ : ದೇವಲತ್ತಿ ಗ್ರಾಮ, ಖಾನಾಪೂರ.

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೬ ಗೊತ್ತು. (ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಮೂಲ ಪಂಚನಾಮೆಯನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಯು ಅವಶ್ಯಕವಾಗಿರುವ ಕಾರಣ ಆ ಪಂಚನಾಮೆಯನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅದನ್ನು ನಿಪಿ-೧೯ ಎಂದು ಗುರುತಿಸಲಾಯಿತು.

ಒಂದು ವರ್ಷದ ಹಿಂದೆ ಬೆಳಿಗ್ಗೆ **೭.೩೦** ಕ್ಕೆ ನಾನು ಖಾನಾಪೂರ-ನಂದಗಡ ರಸ್ತೆಯಲ್ಲಿ ಆಸ್ಪತ್ರೆಗೆ ಹೊಗುತ್ತಿದ್ದೆನು. ಆಗ ಪೋಲಿಸರು ನಮ್ಮನ್ನು ಬಸ್ ಡಿಪೊಗೆ ಕರೆಸಿದ್ದರು. ಅಲ್ಲಿ ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದರು ನಾನು ಸಹಿ ಮಾಡಿದೆ. ಆ ದಿನ ಅಲ್ಲಿ ಪೋಲಿಸರ ಜೊತೆ ಇಬ್ಬರು ವ್ಯಕ್ತಿಗಳು ನಿಂತಿದ್ದರು. ಅಲ್ಲಿ ಒಂದು ಬಜಾಜ ಪಲ್ಸರ ಬೈಕ ಇತ್ತು. ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಅಲ್ಲಿ ಪೋಲಿಸರು ನಮ್ಮನ್ನು ನಿಲ್ಲಿಸಿ ಫೋಟೊ ತೆಗೆದರು. ಸಾಕ್ಷಿಯು ನಿಪಿ-**೨೦** ಮತ್ತು ನಿಪಿ-**೨೧** ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಆ ಬೈಕನ್ನು ಮತ್ತು ಇಬ್ಬರು ವ್ಯಕ್ತಿಗಳನ್ನು ವಾಪಸ ಠಾಣೆಗೆ ಕರೆದುಕೊಂಡು ಹೋದರು. ಸಾಕ್ಷಿಯು ನಿಪಿ-**೨೦** ಮತ್ತು ನಿಪಿ-**೨೧** ರಲ್ಲಿ ಕಾಣುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಅಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ವಾಹನವನ್ನು ಅವರು ಯಾವ ಕಾರಣಕ್ಕಾಗಿ

ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ( ೧ ಮತ್ತು ೨ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಪೋಲಿಸರು ಹಾಜರು ಪಡಿಸಿರುವುದಿಲ್ಲ. ೧ ಮತ್ತು ೨ ನೇ ಆರೋಪಿತರ ಪರ ವಕೀಲರು ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ದಿನಾಂಕ ೧೮-೧೦-೨೦೧೭ ರಂದು ನನ್ನನ್ನು ಮತ್ತು ಚಾಸಾ ೬ ರವರನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರನ್ನು ವಿಚಾರಿಸಿದ್ದು, ಆರೋಪಿತರು ತಾವು ಕಳ್ಳತನ ಮಾಡಲು ಬಳಸಿದ ವಾಹನವನ್ನು ತೋರಿಸುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮನ್ನು, ಇಬ್ಬರು ಆರೋಪಿತರನ್ನು ಪೋಲಿಸ ವಾಹನದಲ್ಲಿ ಖಾನಾಪೂರ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಆ ದಿನ ನೋಡಿದ ಬೈಕ ಸಂಖ್ಯೆ ಜಿಎ-೦೭/ಎ-೪೦೪೩ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಬೈಕನ್ನು ತೋರಿಸಿ ೧ ಮತ್ತು ೨ನೇ ಆರೋಪಿತರು ತಾವು ಇದೇ ಬೈಕನ್ನು ಬಳಸಿ ಕಳ್ಳತನ ಮಾಡುತ್ತಿದ್ದೆವು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ಪೋಲಿಸರು ಪಂಚನಾಮೆ ತಯಾರಿಸಿ ಆ ವಾಹನವನ್ನು ತೆಗೆದುಕೊಂಡರು ಎಂದರೆ ನಿಜ. ನಾನು ಆ ಸ್ಥಳದಲ್ಲಿ ಸಹಿ ಮಾಡಿದ್ದೆ ಎಂದರೆ ನಿಜ. ಆ ದಿನ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ, ೧ ಮತ್ತು ೨ನೇ ಆರೋಪಿತರು ನಮ್ಮನ್ನು ಬಸ ನಿಲ್ದಾಣಕ್ಕೆ ಕರೆದುಕೊಂಡು ಬಂದು ಬೈಕನ್ನು ತೋರಿಸಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಎಲ್ಲ ವಿಷಯಗಳು ಗೊತ್ತಿದ್ದೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎ ಡಿ ಎಲ ವಕೀಲರಿಂದ

ಆ ದಿನ ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೋಲಿಸರು ನಮ್ಮನ್ನು ನಿಲ್ಲಿಸಿ ಫೋಟೊ ತಗೆಸಿದ್ದರು. ಯಾವ ಕಾರಣಕ್ಕಾಗಿ ಫೋಟೊ ತೆಗೆಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಆ ಬೈಕನ್ನು ಚಲಾಯಿಸಿಕೊಂಡು ತೆಗೆದುಕೊಂಡು ಹೋದರು. ಆ ದಿನ ಬಸ್ ನಿಲ್ದಾಣದಲ್ಲಿ ಸುಮಾರು ೩೦ ಬೈಕಗಳು ಇದ್ದವು. ಅವುಗಳ ಸಂಖ್ಯೆ ನನಗೆ ಗೊತ್ತಿಲ್ಲ. ಆ ದಿನ ಪೋಲಿಸರ ಜೊತೆಯಲ್ಲಿದ್ದ ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಮುನ್ನ ಪೋಲಿಸರು ನನಗೆ ಯಾವ ವಿಷಯವನ್ನು ಹೇಳಿರಲಿಲ್ಲ. ನಾನು ಸಹಿ ಮಾಡಿದ

ನಂತರವೂ ಸಹ ಪೋಲಿಸರು ನನಗೆ ಏನು ವಿಷಯವನ್ನು ಹೇಳಿರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.೯೭/೨೦೧೮**

**ಪಿಡಬ್ಲ್ಯು ೩**
**ಸಿಡಬ್ಲ್ಯು ೪**

ಹೆಸರು : ಸಂಜಯ ಈಶ್ವರ ಮುತಗಿ

ವಯಸ್ಸು : ೪೩ ವರ್ಷ

ಉದ್ಯೋಗ : ವ್ಯವಸಾಯ

ವಾಸ : ಜಾಂಬೋಟಿ ಗ್ರಾಮ, ಖಾನಾಪೂರ

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೫ ರವರು ಗೊತ್ತು. ಆರೋಪಿತರನ್ನು ನೋಡಿದ್ದೇನೆ. (ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ೩ ಮೂಲ ಪಂಚನಾಮೆಗಳನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಗಳು ಅವಶ್ಯಕವಾಗಿರುವ ಕಾರಣ ಆ ೩ ಮೂಲ ಪಂಚನಾಮೆಗಳನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಗಳನ್ನು ಮತ್ತು ಅವುಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಗಳ ದೃಢೀಕೃತ ಪ್ರತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-೭ ರಿಂದ ೯ ಎಂದು ಗುರುತಿಸಲಾಯಿತು.

ದಿನಾಂಕ ೧೭-೧೦-೨೦೧೭ ರಂದು ಸಂಜೆ ೭.೦೦ ಗಂಟೆಗೆ ನಾನು ಮತ್ತು ಚಾಸಾ ೫ ರವರು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸನಲ್ಲಿ ನಡೆದುಕೊಂಡು ಹೊಗುತ್ತಿದ್ದಾಗ ಪೋಲಿಸರು ನಮ್ಮನ್ನು ಪಂಚನಾಮೆಗೆ ಬರುವಂತೆ ಕರೆದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು ಮತ್ತು ಒಂದು ವ್ಯಾಕ್ಸ ವ್ಯಾಗನ ಕಾರ ಮತ್ತು ಮಾರುತಿ ಸುಜುಕಿ ವ್ಯಾನ ಇದ್ದವು. ಪೋಲಿಸರಿಗೆ ಸಂಶಯ ಬಂದು ವ್ಯಾಕ್ಸ ವ್ಯಾಗನ ಕಾರಿನ ಡಿಕ್ಕಿಯನ್ನು ಪರಿಶೀಲಿಸಿದರು. ಅಲ್ಲಿ ಒಂದು ಫಾಸ್ ಟ್ರ್ಯಾಕ ಕಂಪನಿಯ ಬ್ಯಾಗ ಇದ್ದು ಅದರಲ್ಲಿ ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್ ಮತ್ತು ಎರಡು ಪಾನ ಇದ್ದವು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ನಿಪಿ-೭ ರಂತೆ

ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಅವೆಲ್ಲವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಈ ಎಲ್ಲ ವಸ್ತುಗಳನ್ನು ಪೋಲಿಸರು ಆ ದಿನ ಜಪ್ತು ಪಡಿಸಿಕೊಂಡಿದ್ದರು. ಪೋಲಿಸರು ಸ್ಥಳದಲ್ಲಿ ತೆಗೆದ ೫ ಫೋಟೋಗಳನ್ನು ನೋಡಿ ಗುರುತಿಸಿದ್ದು, ಫೊಟೋಗಳನ್ನು ಕ್ರಮವಾಗಿ ನಿಪಿ-೧೦ ರಿಂದ ೧೪ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೧೦ ಮತ್ತು ೧೧ ರಲ್ಲಿ ಕಾಣುವ ಕಾರಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-೧೪ ರಲ್ಲಿ ಕಾಣುವ ಒಂದು ಫಾಸ್ಟಾಕ ಬ್ಯಾಗ, ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್, ಒಂದು ಕಟರ್ ಮತ್ತು ಎರಡು ಪಾನಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ಕಾರುಗಳನ್ನು ತೆಗೆದುಕೊಂಡು, ನಮ್ಮನ್ನು ಕರೆದುಕೊಂಡು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಉಪಠಾಣೆಯಲ್ಲಿ ೧ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬೆಳ್ಳಿಯ ಆರತಿ ಸೆಟ್, ಕುಂಕುಮ ಹಾಕುವ ಡಬ್ಬಿ, ಚೆರಿಗೆ, ಚಮಚ ಇತ್ಯಾದಿಗಳನ್ನು ತೆಗೆದು ಹಾಜರು ಪಡಿಸಿದನು. ನಿಖರವಾಗಿ ಆ ದಿನ ಒಟ್ಟು ಎಷ್ಟು ವಸ್ತುಗಳನ್ನು ಹಾಜರು ಪಡಿಸಿದ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ನಿಪಿ-೮ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಖಾನಾಪೂರದಿಂದ ಒಬ್ಬ ವ್ಯಕ್ತಿಯನ್ನು ಕರೆಸಿ ಅವೆಲ್ಲವುಗಳನ್ನು ತೂಕ ಮಾಡಿಸಿ ತಮ್ಮ ವಶಕ್ಕೆ ಪಡೆದುಕೊಂಡರು. ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-೧೫ ಮತ್ತು ೧೬ ಎಂದು ಗುರುತಿಸಲಾಯಿತು.

ಸದರಿ ಉಪಠಾಣೆಯಲ್ಲಿ ೨ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಹಿಂದಿನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬೆಳ್ಳಿಯ ಆರತಿ ಸೆಟ್, ಕುಂಕುಮ ಹಾಕುವ ಡಬ್ಬಿ, ಚೆರಿಗೆ, ಚಮಚ ಇತ್ಯಾದಿಗಳನ್ನು ತೆಗೆದು ಹಾಜರು ಪಡಿಸಿದನು. ಆ ದಿನ ೨ನೇ ಆರೋಪಿಯು ಸುಮಾರು ೪೨ ವಸ್ತುಗಳನ್ನು ಹಾಜರು ಪಡಿಸಿದ. ನಂತರ ಪೋಲಿಸರು ಒಬ್ಬ ವ್ಯಕ್ತಿಯಿಂದ ಅವೆಲ್ಲವುಗಳನ್ನು ತೂಕ ಮಾಡಿಸಿ, ಪೋಲಿಸರು ಸ್ಥಳದಲ್ಲಿ ನಿಪಿ-೯ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು ಮತ್ತು ಆ ವಸ್ತುಗಳನ್ನು ಜಪ್ತುಪಡಿಸಿಕೊಂಡರು. ಪೋಲಿಸರು ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ನಾನು ಅದಕ್ಕೆ ಸಹಿ ಮಾಡಿದೆ. ಪೋಲಿಸರು ಸ್ಥಳದಲ್ಲಿ ತೆಗೆದ

ಎರಡು ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-೧೭ ಮತ್ತು ೧೮ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೫ ರಲ್ಲಿ ಕಾಣುವ ಬಂಗಾರದ ಒಂದು ಕಾಯಿನ, ೧೨ ಸಣ್ಣ ಉಂಗುರಗಳನ್ನು ನೋಡಿ ಗುರುತಿಸಿ, ಅವುಗಳನ್ನು ಆ ದಿನ ೨ನೇ ಆರೋಪಿಯ ವಶದಿಂದ ಜಪ್ತು ಪಡಿಕೊಂಡ ಆಭರಣಗಳು ಎಂದು ನುಡಿದಿರುತ್ತಾರೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ೧ ಮತ್ತು ೨ ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಹಾಜರು ಪಡಿಸಿರುವುದಿಲ್ಲ. ಆದರೆ ಅವರನ್ನು ಗುರುತಿಸಲು ಅವರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.) ಆ ಎಲ್ಲ ಆಭರಣಗಳು ಎಲ್ಲಿಂದ ಬಂದಿದ್ದವು ಅವುಗಳು ಹೇಗೆ ಆರೋಪಿತರ ವಶಕ್ಕೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಪೋಲಿಸರು ನಮಗೆ ಏನನ್ನೂ ಹೇಳಿಲ್ಲ ಮತ್ತು ನಾವು ಆ ಬಗ್ಗೆ ವಿಚಾರಿಸಿಲ್ಲ.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

**ಪಾಟೀ ಸವಾಲು ಃ** ಸಸಅ ರವರಿಂದ

ಆ ದಿನ ಪೋಲಿಸರು ೧ನೇ ಆರೋಪಿಯಿಂದ ೪೨ ಆಭರಣಗಳನ್ನು ಮತ್ತು ೨ನೇ ಆರೋಪಿಯಿಂದ ೪೦ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರು ಎಂದರೆ ನಿಜ. ಪೋಲಿಸರು ೧ ಮತ್ತು ೨ ನೇ ಆರೋಪಿತರನ್ನು ನನ್ನ ಸಮಕ್ಷಮ ವಿಚಾರಿದಾಗ ಅವರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದರು ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ೧ ಮತ್ತು ೨ನೇ ಆರೋಪಿತರು ನಿಪಿ-೧೪ ರಲ್ಲಿ ಕಾಣುವ ವಸ್ತುಗಳನ್ನು ಬಳಸಿ ಮನೆಗಳಲ್ಲಿ ಕಳ್ಳತನ ಮಾಡಿದ್ದೆವು ಎಂದು ನನ್ನ ಸಮಕ್ಷಮ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಮೇಲೆ ಹೇಳಿದಂತೆ ತಿಳಿಸಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ** ಆರೋಪಿ ಪರ ಶ್ರೀ ಎ ಡಿ ಎಲ ವಕೀಲರಿಂದ

ನನಗೆ ಕನ್ನಡ ಓದಲು, ಬರೆಯಲು ಮತ್ತು ಸರಿಯಾಗಿ ಮಾತನಾಡಲು ಬರುವುದಿಲ್ಲ. ನಾನು ಮತ್ತು ಚಾಸಾ **೫** ರವರು ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ.

ಪೋಲಿಸರು ಪಂಚನಾಮೆ ತಯಾರಿಸಿ ಇಟ್ಟಿದ್ದರು. ನಾನು ಮತ್ತು ಚಾಸಾ ೫ ರವರು ಅದಕ್ಕೆ ಸಹಿ ಮಾಡಿದೆವು. ಆ ದಿನ ಪೋಲಿಸರು ಅಂದಾಜು ನನ್ನ ೫ ಸಹಿ ಪಡೆದರು. ಆ ದಿನ ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ತಡೆ ಹಿಡಿದು ತಪಾಸಣೆ ಮಾಡಲಿಲ್ಲ. ನನಗೆ ಆರೋಪಿತರ ಪೂರ್ಣ ಹೆಸರುಗಳನ್ನು ಹೇಳಲು ಬರುವುದಿಲ್ಲ. ಪೋಲಿಸರು ಆರೋಪಿತರ ಹೆಸರುಗಳನ್ನು ಹೇಳಿದ್ದರ ಮೇರೆಗೆ ನಾನು ಅವರ ಹೆಸರುಗಳನ್ನು ಹೇಳಿದ್ದೆ. ಆ ದಿನ ನೋಡಿದ ವಾಹನಗಳ ಸಂಖ್ಯೆಗಳನ್ನು ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಜಪ್ತುಪಡಿಸಿಕೊಳ್ಳುವ ವಸ್ತುಗಳನ್ನು ಆರೋಪಿತರು ಕೊಡಬೇಕು ಆದರೆ ನನ್ನ ಸಮಕ್ಷಮ ಪೋಲಿಸರು ಆ ಆಭರಣಗಳನ್ನು ಕೊಟ್ಟಿದ್ದರು ಎಂದರೆ ನಿಜ. ಪ್ರತಿ ಊರಿನಲ್ಲಿ ಆ ಊರಿನ ನಾಮಫಲಕ ಇರುತ್ತದೆ ಎಂದರೆ ನಿಜ. ಜಾಂಬೋಟಿಯಲ್ಲಿ ಖಾನಾಪೂರ ಕ್ರಾಸ ಎಂಬ ಸ್ಥಳದ ನಾಮಫಲಕ ಇಲ್ಲ ಎಂದರೆ ನಿಜ.

ಆ ದಿನ ಪೋಲಿಸರು ಪಡೆದುಕೊಂಡ ವಸ್ತುಗಳಲ್ಲಿ ಎಷ್ಟು ಬಂಗಾರದ ಆಭರಣಗಳು ಮತ್ತು ಎಷ್ಟು ಬೆಳ್ಳಿಯ ಆಭರಣಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಆ ದಿನ ಪೋಲಿಸರು ಫೋಟೊಗಳನ್ನು ಏಕೆ ತೆಗೆದರು ಎಂದು ಗೊತ್ತಿಲ್ಲ. ಬಹುಶಃ ಕಳುವಿನ ಪ್ರಕರಣ ಆಗಿದ್ದ ಕಾರಣ ತೆಗೆದಿರಬಹುದು. ಆ ಪ್ರಕರಣ ಕಳುವಿನ ಪ್ರಕರಣ ಎಂದು ಪೋಲಿಸರು ನನಗೆ ಹೇಳಿದ್ದರು. ನಾನು ಯಾವಾಗಲೂ ಒಂದೇ ರೀತಿಯ ಸಹಿಯನ್ನು ಮಾಡುತ್ತೇನೆ. ಆ ದಿನ ನಾನು ಯಾವುದೇ ಚೀಟಿಗಳ ಮೇಲೆ ಸಹಿ ಮಾಡಿರಲಿಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-೨ ರಿಂದ ೯ ರಂತೆ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಮತ್ತು ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಆಭರಣಗಳನ್ನು ಆರೋಪಿತರ ವಶದಿಂದ ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುವನ್ನು ನೋಡಿದಾಗ ಇದು ಬಂಗಾರ ಅಥವಾ ಬೆಳ್ಳಿ ಎಂದು ಹೇಳಲು ನಾನು ಯಾವುದೇ ವಿಶೇಷ ತರಬೇತಿಯನ್ನು ಪಡೆದಿಲ್ಲ. ಪೋಲಿಸರು ನಿಪಿ-೧೦ ರಿಂದ ೧೮ ರಂತೆ ಫೋಟೊಗಳನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಆ ದಿನ ಫೋಟೊಗಳನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೊಗಳಲ್ಲಿ ಅವುಗಳನ್ನು ಯಾವ ಸ್ಥಳದಲ್ಲಿ ತೆಗೆಯಲಾಗಿದೆ ಎಂದು ಯಾವುದೇ ಗುರುತುಗಳು ಕಂಡು ಬರುವುದಿಲ್ಲ ಎಂದರೆ ನಿಜ. ಜಾಂಬೋಟಿ ರಸ್ತೆಯು ಹೆದ್ದಾರಿಯಾಗಿದ್ದು ಅಲ್ಲಿ ಸಾಕಷ್ಟು ಜನರು ಮತ್ತು ವಾಹನಗಳು ಓಡಾಡುತ್ತವೆ ಎಂದರೆ ನಿಜ. ಆ ರಸ್ತೆಯಲ್ಲಿ ಪಂಚನಾಮೆ ಮಾಡಲು ಪೋಲಿಸರು ಸೇರಿದಾಗ ಅಲ್ಲಿ ಕೌತುಕದಿಂದ ಸಾಕಷ್ಟು ಜನರು ಸೇರುತ್ತಾರೆ ಎಂದರೆ ನಿಜ. ಆದರೆ ಆ ದಿನ ಅಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಫೋಟೊಗಳಲ್ಲಿ ಕಾಣುವ

ಕಟ್ಟಡ ಅದು ಠಾಣೆಯೋ ಅಥವಾ ಮನೆಯೋ ಎಂದು ಆ ಫೋಟೊದಲ್ಲಿ ಕಂಡು ಬರುವುದಿಲ್ಲ ಎಂದರೆ ನಿಜ. ಸಾಮಾನ್ಯವಾಗಿ ಪೋಲಿಸರು ಹೇಳಿದಂತೆ ಫೋಟೊಗ್ರಾಫರ ಫೋಟೊ ತೆಗೆಯುತ್ತಾನೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-**೧೪** ರಲ್ಲಿ ಕಾಣುವ ವಸ್ತುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತು ಪಡಿಸಿಕೊಂಡರು ಎಂದು ಹೇಳಲು ಅವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ನಿಜ. ಆ ವಸ್ತುಗಳಿಗೂ ಮತ್ತು ಬಂಗಾರದ ಆಭರಣಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನಿಪಿ-**೧೦** ರಿಂದ **೧೮** ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. (ಸಿ.ಸಿ.**೧೭೨೮/೨೦೧೭** ರಿಂದ ಪಡೆದು **೩** ಮೂಲ ಪಂಚನಾಮೆಗಳನ್ನು ಆ ಪ್ರಕರಣಕ್ಕೆ ಹಿಂದಿರುಗಿಸಲಾಯಿತು.)

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ**

**ಸಿ.ಸಿ.ನಂ.೯೭/೨೦೧೮**

**ಪಿಡಬ್ಲ್ಯು ೪**

**ಸಿಡಬ್ಲ್ಯು ೫**

ಹೆಸರು : ನಾಗಪ್ಪ ಅಪ್ಪಣ್ಣ ತೇಲಿ

ವಯಸ್ಸು : ೫೦ ವರ್ಷ

ಉದ್ಯೋಗ : ವ್ಯವಸಾಯ

ವಾಸ : ಜಾಂಬೋಟಿ ಗ್ರಾಮ, ಖಾನಾಪೂರ

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ः ಎಪಿಪಿ ಅವರಿಂದ.**

ಚಾಸಾ ೪ ರವರು ಗೊತ್ತು. (ಸಸ೩ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ೩ ಮೂಲ ಪಂಚನಾಮೆಗಳನ್ನು ಸಾಕ್ಷಿಗಳಿಗೆ ತೋರಿಸಲು ಮತ್ತು ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಗಳು ಅವಶ್ಯಕವಾಗಿರುವ ಕಾರಣ ಆ ೩ ಮೂಲ ಪಂಚನಾಮೆಗಳನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಗಳನ್ನು ಮತ್ತು ಅವುಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಗಳ ದೃಢೀಕೃತ ಪ್ರತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು , ಅವುಗಳನ್ನು ಈಗಾಗಲೇ ನಿಪಿ-೭ ರಿಂದ ೯ ಎಂದು ಗುರುತಿಸಲಾಗಿದೆ.

ದಿನಾಂಕ ೧೭-೧೦-೨೦೧೭ ರಂದು ಸಂಜೆ ನಾನು ಮತ್ತು ಚಾಸಾ ೪ ರವರು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಪೋಲಿಸರು ನಮ್ಮನ್ನು ಪಂಚನಾಮೆಗೆ ಬರುವಂತೆ ಕರೆದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು ಮತ್ತು ಒಂದು ವ್ಯಾಕ್ಸ ವ್ಯಾಗನ ಕಾರ ಮತ್ತು ಮಾರುತಿ ಸುಜುಕಿ ವ್ಯಾನ ಇದ್ದವು. ಪೋಲಿಸರು ವ್ಯಾಕ್ಸ ವ್ಯಾಗನ ಕಾರಿನ ಡಿಕ್ಕಿಯನ್ನು ಪರಿಶೀಲಿಸಿದರು. ಅಲ್ಲಿ ನಿಪಿ-೧೪ ರಲ್ಲಿ ಕಾಣುವ ವಸ್ತುಗಳು ಇದ್ದವು. ಪೋಲಿಸರು ಸ್ಥಳದಲ್ಲಿ ನಿಪಿ-೭ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ಪಂಚನಾಮೆಯನ್ನು ಮಶೀನ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಅವೆಲ್ಲವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು.

ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-೧೦ ರಿಂದ ೧೪ ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ-೧೦ ಮತ್ತು ೧೧ ರಲ್ಲಿ ಕಾಣುವ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ವಾಹನಗಳನ್ನು ತೆಗೆದುಕೊಂಡು, ನಮ್ಮನ್ನು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಉಪಠಾಣೆಯಲ್ಲಿ ೧ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಮುಂದಿನ ಸೀಟಿನ ಅಡಿಯಲ್ಲಿದ್ದ ಅನೇಕ ಆಭರಣಗಳನ್ನು ಹಾಜರು ಪಡಿಸಿದ. ನಿಖರವಾಗಿ ಆ ದಿನ ಒಟ್ಟು ಎಷ್ಟು ವಸ್ತುಗಳನ್ನು ಹಾಜರು ಪಡಿಸಿದ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ನಿಪಿ-೮ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ನಂತರ ಪೋಲಿಸರು ಅವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ -೧೫ ಮತ್ತು ೧೬ ಎಂದು ಗುರುತಿಸಲಾಗಿದೆ. ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

ಆ ದಿನ ಪೋಲಿಸರು ಎಷ್ಟು ಪಂಚನಾಮೆ ಮಾಡಿದ್ದರು ಎಂದು ನನಗೆ ನೆನಪಿಲ್ಲ. ಇಷ್ಟು ಸಂಗತಿಗಳನ್ನು ಬಿಟ್ಟು ನನಗೆ ಬೇರೇನೂ ನೆನಪಿಲ್ಲ. ನಿಪಿ-೧೭ ಮತ್ತು ೧೮ನ್ನು ಸಾಕ್ಷಿಯು ನೋಡಿ ಈ ಫೋಟೊಗಳನ್ನು ಪೋಲಿಸರು ಠಾಣೆಯಲ್ಲಿ ತೆಗೆದಿದ್ದರು ಎಂದು ನುಡಿದಿರುತ್ತಾರೆ. ಈ ಫೋಟೊಗಳನ್ನು ಕಾರುಗಳಲ್ಲಿ ಆಭರಣಗಳಿದ್ದ ಕಾರಣಕ್ಕಾಗಿ ತೆಗೆದಿದ್ದರು. ಇಷ್ಟು ಸಂಗತಿಗಳನ್ನು ಬಿಟ್ಟು ನನಗೆ ಬೇರೇನೂ ನೆನಪಿಲ್ಲ. ಆ ದಿನ ನೋಡಿದ ಆರೋಪಿತರನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

**ಪಾಟೀ ಸವಾಲು ಃ** ಸಸಅ ರವರಿಂದ

ಪೋಲಿಸರು ನನ್ನ ಸಮಕ್ಷಮ ಆರೋಪಿತರನ್ನು ವಿಚಾರಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದರು ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ೧ ಮತ್ತು ೨ನೇ ಆರೋಪಿತರು ನಿಪಿ-೧೪ ರಲ್ಲಿ ಕಾಣುವ ವಸ್ತುಗಳನ್ನು ಬಳಸಿ ಮನೆಗಳಲ್ಲಿ ಕಳ್ಳತನ ಮಾಡಿದ್ದೆವು ಎಂದು

ನನ್ನ ಸಮಕ್ಷಮ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಮೇಲೆ ಹೇಳಿದಂತೆ ತಿಳಿಸಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ದಿನ ೧ನೇ ಆರೋಪಿಯ ವಶದಿಂದ ನಿಪಿ-೮ ರಲ್ಲಿ ನಮೂದಿಸಿದ ಒಟ್ಟು ೪೨ ಆಭರಣಗಳನ್ನು ಪೋಲಿಸರು ಜಪ್ತುಪಡಿಸಿಕೊಂಡರು ಎಂದರೆ ಎಷ್ಟು ಆಭರಣಗಳು ಇದ್ದವು ಎಂದು ನನಗೆ ನೆನಪಿಲ್ಲ. ಆಗ ಪೋಲಿಸರು ಒಬ್ಬ ಅಕ್ಕಸಾಲಿಗನನ್ನು ಕರೆಸಿ ಆಭರಣಗಳನ್ನು ತೂಕ ಮಾಡಿಸಿದರು ಎಂದರೆ ನಿಜ. ಆಗ ಪೋಲಿಸರು ವಿಡಿಯೋವನ್ನು ಸಹ ತೆಗೆಸಿದ್ದರು ಎಂದರೆ ನಿಜ.

ಆ ದಿನ ಉಪಠಾಣೆಯಲ್ಲಿ ೨ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಹಿಂದಿನ ಸೀಟಿನ ಅಡಿಯಲ್ಲಿದ್ದ ೪೦ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ತೆಗೆದು ಹಾಜರು ಪಡಿಸಿದನು ಎಂದರೆ ನಿಜ. ಆದರೆ ಎಷ್ಟು ಆಭರಣಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಆಗ ಪೋಲಿಸರು ಅಕ್ಕಸಾಲಿಗನಿಂದ ಸದರಿ ಆಭರಣಗಳನ್ನು ತೂಕ ಮಾಡಿಸಿದರು ಎಂದರೆ ನಿಜ. ಆಗ ಪೋಲಿಸರು ವಿಡಿಯೋವನ್ನು ಸಹ ತೆಗೆಸಿದ್ದರು ಎಂದರೆ ನಿಜ. ಪೋಲಿಸರು ಸ್ಥಳದಲ್ಲಿ ನಿಪಿ-೯ ರಂತೆ ಪಂಚನಾಮೆ ತಯಾರಿಸಿ, ನಿಪಿ-೧೭ ಮತ್ತು ೧೮ ರಂತೆ ಫೋಟೊಗಳನ್ನು ತೆಗೆದರು ಮತ್ತು ಆ ವಸ್ತುಗಳನ್ನು ಜಪ್ತುಪಡಿಸಿಕೊಂಡರು ಎಂದರೆ ನಿಜ. ನಿಪಿ-೫ ರಲ್ಲಿ ಕಾಣಿಸುವ ಬಂಗಾರದ ಕಾಯಿನ ಮತ್ತು ೧೨ ಸಣ್ಣ ಉಂಗುರಗಳನ್ನು ಪೋಲಿಸರು ಆ ದಿನ ೨ನೇ ಆರೋಪಿಯ ವಶದಿಂದ ಜಪ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಹೇಳಲು ಆಗುವುದಿಲ್ಲ.

ಪೋಲಿಸರು ನನ್ನ ಸಮಕ್ಷಮ ಆರೋಪಿತರನ್ನು ವಿಚಾರಿಸಿದ್ದರೂ ಸಹ ನಾನು ಈಗ ವಿಚಾರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೧ ಮತ್ತು ೨ನೇ ಆರೋಪಿತರಿಂದ ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳಲ್ಲಿ ನಿಪಿ-೫ ರಲ್ಲಿ ಕಾಣುವ ಆಭರಣಗಳು ಸಹ ಇದ್ದು, ನಾನು ಅವುಗಳನ್ನು ನೋಡಿದ್ದರೂ ಸಹ ಈಗ ಈ ವಿಷಯ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಸದರಿ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರೂ ಸಹ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎ ಡಿ ಎಲ ವಕೀಲರಿಂದ

ನನಗೆ ಕನ್ನಡ ಓದಲು, ಬರೆಯಲು ಮತ್ತು ಸರಿಯಾಗಿ ಮಾತನಾಡಲು ಬರುವುದಿಲ್ಲ. ನಾನು ಮತ್ತು ಚಾಸಾ ೪ ರವರು ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ. ಪಂಚನಾಮೆಯನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಪಂಚನಾಮೆ ತಯಾರಿಸಿ ಇಟ್ಟಿದ್ದರು. ನಾನು ಮತ್ತು ಚಾಸಾ ೪ ಅದಕ್ಕೆ ಸಹಿ ಮಾಡಿದೆವು. ಆ ದಿನ ಪಂಚನಾಮೆಗಳಿಗೆ ನಾನು ಮತ್ತು ಚಾಸಾ ೪ ಮಾತ್ರ ಸಹಿ ಮಾಡಿದ್ದೆವು. ನಮ್ಮನ್ನು ಹೊರತು ಪಡಿಸಿ ಬೇರೆ ಯಾರೂ ಸಹಿ ಮಾಡಿರಲಿಲ್ಲ. ಆ ದಿನ ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ತಡೆ ಹಿಡಿದು ತಪಾಸಣೆ ಮಾಡಲಿಲ್ಲ. ಆ ದಿನ ನೋಡಿದ ವಾಹನಗಳ ಸಂಖ್ಯೆಗಳನ್ನು ಹೇಳಲು ಆಗುವುದಿಲ್ಲ. ನಿಪಿ-೭ ರಿಂದ ೯ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ. ಆ ಎಲ್ಲ ಸಹಿಗಳನ್ನು ಒಂದೇ ದಿನ ಮಾಡಿದ್ದೇನೆ. ಆ ದಿನ ಆರೋಪಿತರಿಂದ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಆ ದಿನ ಪೋಲಿಸರು ಫೋಟೊಗಳನ್ನು ಏಕೆ ತೆಗೆದರು ಎಂದು ಗೊತ್ತಿಲ್ಲ. ಆ ದಿನ ನಾನು ಯಾವುದೇ ಚೀಟಿಗಳ ಮೇಲೆ ಸಹಿ ಮಾಡಿರಲಿಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-೭ ರಿಂದ ೯ ರಂತೆ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ, ಯಾವುದೇ ವಸ್ತುಗಳನ್ನು ಮತ್ತು ವಾಹನಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಆಭರಣಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಇದ್ದ ಅಕ್ಕಸಾಲಿಗನ ಹೆಸರು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುವನ್ನು ನೋಡಿದಾಗ ಇದು ಬಂಗಾರ ಅಥವಾ ಬೆಳ್ಳಿ ಎಂದು ಹೇಳಲು ಯಾವುದೇ ವಿಶೇಷ ತರಬೇತಿಯನ್ನು ಪಡೆದಿಲ್ಲ. ಪೋಲಿಸರು ನಿಪಿ-೧೦ ರಿಂದ ೧೮ ರಂತೆ ಫೋಟೊಗಳನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-೧೪ ರಲ್ಲಿ ಕಾಣುವ ವಸ್ತುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತು ಪಡಿಸಿಕೊಂಡರು ಎಂದು ಹೇಳಲು ಇವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ನಿಜ. ಆ ವಸ್ತುಗಳಿಗೂ, ಬಂಗಾರದ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನಿಪಿ-೧೦ ರಿಂದ ೧೮ ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. (ಸಿ.ಸಿ. **೧೭೨೮/೨೦೧೭** ರಿಂದ ಪಡೆದು ೩ ಮೂಲ ಪಂಚನಾಮೆಗಳನ್ನು ಆ ಪ್ರಕರಣಕ್ಕೆ ಹಿಂದಿರುಗಿಸಲಾಯಿತು.)

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.೯೭/೨೦೧೮**

**ಪಿಡಬ್ಲು ೨**
**ಸಿಡಬ್ಲು ೧**

ಹೆಸರು : ಜೋಹೆಲ ಅಬ್ದುಲಗನಿ ಸನದಿ

ವಯಸ್ಸು : ೨೬ ವರ್ಷ

ಉದ್ಯೋಗ : ಎಲೆಕ್ಟ್ರಿಕಲ್ ಕೆಲಸ

ವಾಸ : ಬೀಡಿ ಗ್ರಾಮ, ಖಾನಾಪೂರ ತಾಲೂಕು.

**ದಿನಾಂಕ ೨೪-೦೭-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ : ಎಪಿಪಿ ಅವರಿಂದ.</u>**

ಚಾಸಾ ೧೦ ನನ್ನ ಸಹೋದರ, ಚಾಸಾ ೧೧ ನನ್ನ ತಂದೆ. ನಾನು ಮತ್ತು ಚಾಸಾ ೧೦ ಬೆಳಗಾವಿಯಲ್ಲಿ ವಾಸ ಮಾಡುತ್ತೇವೆ. ದಿನಾಂಕ ೧೯-೦೩-೨೦೧೭ ರಂದು ನಾನು ಬೆಳಗಾವಿಯಲ್ಲಿದ್ದಾಗ ನನ್ನ ತಂದೆ ತಾಯಿ ಇಬ್ಬರೂ ನನ್ನ ಮನೆಗೆ ಬಂದಿದ್ದರು. ಅವರಿಬ್ಬರೂ ಬೀಡಿಯಲ್ಲಿರುವ ತಮ್ಮ ಮನೆಗೆ ಬೀಗ ಹಾಕಿಕೊಂಡು ಬಂದಿದ್ದರು. ದಿನಾಂಕ ೨೦-೦೩-೨೦೧೭ ರಂದು ಚಾಸಾ ೧೩ ರವರು ನನಗೆ ಫೋನ ಮಾಡಿ ನಿಮ್ಮ ಮನೆಯ ಬಾಗಿಲು ತೆರೆದಿದೆ, ಮನೆಯಲ್ಲಿ ಯಾರೂ ಇಲ್ಲ ಎಂದು ತಿಳಿಸಿದರು. ತಕ್ಷಣ ನಾನು ಮತ್ತು ಚಾಸಾ ೧೦ ರವರು ಬೀಡಿ ಗ್ರಾಮಕ್ಕೆ ಬಂದು ನೋಡಿದೆವು. ನನ್ನ ತಂದೆ ಮನೆಗೆ ಹಾಕಿದ್ದ ಬೀಗವನ್ನು ತೆಗೆದು ಕಟ್ಟೆಯಮೇಲೆ ಇಟ್ಟಿದ್ದರು. ನಾವು ಒಳಗೆ ಹೋಗಿ ನೋಡಲಾಗಿ, ಬೆಡ ರೂಮಿನಲ್ಲಿದ್ದ ಟ್ರೇಜರಿಯನ್ನು ಮುರಿದು ತೆಗೆದಿದ್ದರು. ಅದರಲ್ಲಿದ್ದ ಎಲ್ಲ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ಅದರಲ್ಲಿದ್ದ ರೂ.೩,೫೦೦/- ಹಣ, ಬಂಗಾರದ ಒಂದು ಜೊತೆ ಕಿವಿಯ ಹೂ, ೧೨ ಉಂಗುರುಗಳು ಕಳ್ಳತನ ಆಗಿದ್ದವು. ನಮ್ಮ ಮನೆಗೆ ಅಂಟಿಕೊಂಡಿರುವ, ಒಳಭಾಗದಲ್ಲಿದ್ದ ಅಂಗಡಿಯ ಗಲ್ಲಾಪಟ್ಟಿಯಲ್ಲಿದ್ದ ರೂ.೩೫,೦೦೦/- ಹಣ, ಎರಡು ಬಂಗಾರದ ಕಾಯಿನಗಳು ಮತ್ತು ಒಂದು ಉಂಗುರ ಕಳ್ಳತನ ಆಗಿದ್ದವು.

ನಂತರ ನಾನು ಚಾಸಾ ೧೩ ರವರಿಂದ ದೂರನ್ನು ಬರೆಸಿ ಪೋಲಿಸರಿಗೆ ಕೊಟ್ಟೆನು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-೪ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-೪(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರು ಸ್ಥಳಕ್ಕೆ ಪಂಚನಾಮೆ ಮಾಡಲು ಬಂದಿದ್ದರು. ಆಗ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿದೆ. ಆಗ ಪೋಲಿಸರು ನಿಪಿ-೨ ರಂತೆ ಪಂಚನಾಮೆ ಬರೆದು, ನಿಪಿ-೩ ರಂತೆ ಫೋಟೊ ತೆಗೆಸಿದರು. ಸ್ಥಳದಲ್ಲಿದ್ದ ಬೀಗವನ್ನು ಪೋಲಿಸರು

ತೆಗೆದುಕೊಂಡರು. ಸಾಕ್ಷಿಯು ಆ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಲೇ ಎಂ.ಓ-೧ ಎಂದು ಗುರುತಿಸಲಾಗಿದೆ.

ಎಂಟು ತಿಂಗಳ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಆಗ ಸಾಕಷ್ಟು ಆಭರಣಗಳು ಇದ್ದು, ಪೋಲಿಸರು ಅವುಗಳಲ್ಲಿನ ನಮ್ಮ ಆಭರಣಗಳನ್ನು ಗುರುತಿಸಲು ಹೇಳಿದ್ದರಿಂದ ಅವುಗಳಲ್ಲಿದ್ದ, ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಆಭರಣಗಳನ್ನು ನೋಡಿ ಗುರುತಿಸಿದೆನು. ಅಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ೧೨ ಉಂಗುರಗಳು, ಒಂದು ಕಾಯಿನ ಮಾತ್ರ ಇದ್ದವು. ಆಗ ಠಾಣೆಯಲ್ಲಿ ಮೂರು ಜನ ಆರೋಪಿತರು ಇದ್ದರು. ನ್ಯಾಯಾಲಯದಲ್ಲಿರುವ ಇಬ್ಬರು ಅರೋಪಿತರನ್ನು ಸಾಕ್ಷಿಯ ನೋಡಿ ಗುರುತಿಸಿದ್ದು, ೩ ನೇ ಆರೋಪಿಯನ್ನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಆತನನ್ನು ಗುರುತಿಸಲು ಆತನ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಇವರೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದರು ಎಂದು ಪೋಲಿಸರು ತಿಳಿಸಿದರು. ಉಳಿದ ಆಭರಣವನ್ನು ಮಾರಾಟ ಮಾಡಿ ಮತ್ತು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದ ಹಣವನ್ನು ಖರ್ಚು ಮಡಿರುವುದಾಗಿ ಪೋಲಿಸರು ತಿಳಿಸಿದರು.

ನಂತರ ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ನನ್ನ ಆಭರಣಗಳನ್ನು ಬಿಡಿಸಿಕೊಂಡೆ. ನನ್ನ ಆಭರಣಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಫೋಟೋದಲ್ಲಿ ಕಾಣುವ ೧೨ ಉಂಗುರ ಮತ್ತು ಕಾಯಿನನ್ನು ನೋಡಿ ಗುರುತಿಸಿದ್ದು, ಆ ಫೋಟೊವನ್ನು ನಿಪಿ-೫ ಎಂದು ಗುರುತಿಸಲಾಯಿತು. ನಮ್ಮ ಮನೆಯ ಸಂಖ್ಯೆ ೪೦೬. ಅದು ನನ್ನ ಸಹೋದರನ ಹೆಸರಿನಲ್ಲಿದೆ. ಸಾಕ್ಷಿಯು ತನ್ನ ಮನೆಯ ಉತಾರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-೬ ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲು** ಃ ಶ್ರೀ. ಎ ಡಿ ಎಲ ವಕೀಲರಿಂದ</u>

ನಾನು ದ್ವಿತಿಯ ಪಿ.ಯು.ಸಿ ಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ದೂರನ್ನು ನಾನು ಮನೆಯಲ್ಲಿಯೇ ಬರೆಸಿದ್ದೆನು. ನನಗೆ ಕನ್ನಡ ಓಡಲು ಬರೆಯಲು ಬರುತ್ತದೆ. ದೂರನ್ನು ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಚಾಸಾ ೧೩ ರವರು ನಮ್ಮ ಮನೆಯ ಪಕ್ಕದಲ್ಲಿ ವಾಸವಿದ್ದಾರೆ. ಯಾರಾದರೂ ಕಷ್ಟದಲ್ಲಿದ್ದಾಗ ಚಾಸಾ ೧೩ ರವರು ಅವರಿಗೆ ಸಹಾಯ ಮಾಡಲು ದೂರು ಬರೆದು ಕೊಡುವುದು ಮತ್ತು ಅವರ ಪರವಾಗಿ ಠಾಣೆಗೆ ಹೋಗುವುದು ಮಾಡುತ್ತಾರೆ ಎಂದರೆ ನಿಜ. ಅವರು ಪೋಲಿಸರೊಂದಿಗೆ ಒಳ್ಳೆಯ ಒಡನಾಟದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮನೆಯ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿಲ್ಲ. ಅದನ್ನು ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ.

ನಮ್ಮ ಮನೆಯ ಸುತ್ತ-ಮುತ್ತ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ನಿಜ. ಅಲ್ಲಿ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ನಿಜ. ದೂರು ನೀಡಲು ನಾನೊಬ್ಬನೇ ಠಾಣೆಗೆ ಹೋಗಿದ್ದೆನು. ಆಗ ಸಂಜೆ ೬.೦೦ ಗಂಟೆ ಆಗಿತ್ತು. ನಿಪಿ-೨ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿದೆ. ನನ್ನ ಮನೆಯ ಚೆಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ನಾನು ಪಂಚನಾಮೆಯ ಕಾಲಕ್ಕೆ ನನ್ನ ಮನೆಯ ಸಂಖ್ಯೆಯನ್ನು ಪೊಲಿಸರಿಗೆ ಹೇಳಿಲ್ಲ. ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-೩ ರಲ್ಲಿ ಕಾಣುವ ಮನೆ ನನ್ನದೇ ಎಂದು ಹೇಳಲು ಯವುದೇ ವಿಶೇಷ ಗುರುತು ಇಲ್ಲ ಎಂದರೆ ನಿಜ.

ಎಂಟು ತಿಂಗಳ ನಂತರ ನಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ನನಗೆ ಆಭರಣಗಳನ್ನು ತೋರಿಸಿದ್ದರು. ಆಗ ನಾನು ಪೋಲಿಸರೊಂದಿಗೆ ಯಾವುದೇ ಮಾತುಕತೆ ನಡೆಸಿರಲಿಲ್ಲ. ನನ್ನ ಸಮಕ್ಷಮ ಪೋಲಿಸರು ಆರೋಪಿತರ ಮಧ್ಯೆ ಯಾವುದೇ ಸಂಭಾಷಣೆ ನಡೆದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ.

ನಮ್ಮ ಮನೆಯಲ್ಲಿ ಯಾವುದೇ ವಸ್ತುಗಳ ಕಳ್ಳತನ ಆಗಿರಲಿಲ್ಲ, ಪೋಲಿಸರು ನನ್ನ ಮನೆಗೆ ಬಂದಿಲ್ಲ ಮತ್ತು ಅಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾನು ಆರೋಪಿತರನ್ನು ನೋಡಿಲ್ಲ, ಪೋಲಿಸರು ಆ ದಿನ ಯಾವುದೇ ಆರೋಪಿತರನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-೫ ರಲ್ಲಿ ಕಾಣುವ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ಅಂಕಿ ಸಂಖ್ಯೆಗಳಿಗಾಗಿ ಹಾಕಿದ ಸುಳ್ಳು ಪ್ರಕರಣದಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೯೭/೨೦೧೮**

**ಪಿಡಬ್ಲ್ಯು ೧**
**ಸಿಡಬ್ಲ್ಯು ೨**

| | | |
|---|---|---|
| ಹೆಸರು | ಃ | ಶಂಕರ ಬಾಬುರಾವ ಜಾಧವ |
| ವಯಸ್ಸು | ಃ | ೩೨ ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸ | ಃ | ಬೀಡಿ ಗ್ರಾಮ, ಖಾನಾಪೂರ ತಾಲೂಕು. |

**ದಿನಾಂಕ ೧೯-೦೨-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ.**

ದಿನಾಂಕ ೨೦-೦೩-೨೦೧೭ ರಂದು ಚಾಸಾ ೧ ರವರ ಮನೆಗೆ ಪೋಲಿಸರು ಶ್ವಾನದಳದೊಂದಿಗೆ ಬಂದು ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಗುರುತಿಸಲು ತಮ್ಮ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. ಸದರಿ ಶ್ವಾನದಳದ ಪಂಚನಾಮೆಯನ್ನು ನಿಪಿ ೧ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ ೧ ರವರ ಮನೆಯಲ್ಲಿ ಕಳ್ಳತನ ಆಗಿದ್ದ ಕಾರಣ ಪೋಲಿಸರು ಅಲ್ಲಿ ಸ್ಥಳ ಪಂಚನಾಮೆಯನ್ನು ಬರೆದರು. ಆ ಮನೆಯಲ್ಲಿದ್ದ ಟ್ರೇಜರಿ ಮತ್ತು ಪಕ್ಕದಲ್ಲಿದ್ದ ಅಂಗಡಿಯ ಗಲ್ಲಾ ಪಟ್ಟಿಯಲ್ಲಿದ್ದ ಎಲ್ಲ ವಸ್ತುಗಳು ಕಳ್ಳತನ ಆಗಿದ್ದವು ಎಂದು ಚಾಸಾ ೧ ರವರು ಹೇಳಿದರು. ಮನೆ ಮತ್ತು ಅಂಗಡಿ ಒಂದೇ ಕಡೆ ಇದ್ದವು. ಪಂಚನಾಮೆ ಬರೆದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೆ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೨ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೨(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲಿಸರು ಫೋಟೋ ತೆಗೆದರು. ಸಾಕ್ಷಿಯು ಆ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ ೩ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ. ಪಂಚನಾಮೆ ಕಾಲಕ್ಕೆ ನನ್ನೊಂದಿಗೆ ಚಾಸಾ ೩ ರವರು ಹಾಜರಿದ್ದರು.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

ಪಾಟೀ ಸವಾಲು ಃ ಸಸಅ ರವರಿಂದ

ಆ ದಿನ ಪೋಲಿಸರು ಪಂಚನಾಮೆ ಮಾಡುವ ಕಾಲಕ್ಕೆ ಆ ಮನೆಯ ಮುರಿದ ಬೀಗ ಅಲ್ಲಿಯೇ ಬಿದ್ದಿದ್ದು ಪೋಲಿಸರು ಅದನ್ನು ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡರು ಎಂದರೆ ನಿಜ. ಸಾಕ್ಷಿಯು ಆ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಎಂ. ಒ. ೧ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ೨ನೇ ಆರೋಪಿ ಪರ ವಕೀಲರಿಂದ

ನಾನು ಪ್ರತಿ ದಿನ ಬೆಳಿಗ್ಗೆ ೧೦.೦೦ ಗಂಟೆಗೆ ಕೆಲಸಕ್ಕೆ ಹೋದರೆ ಸಂಜೆ ೬.೦೦ ಗಂಟೆಗೆ ವಾಪಸ ಬರುತ್ತೇನೆ. ಚಾಸಾ ೧ ರವರು ನನಗೆ ಪರಿಚಯಸ್ಥರು ಮತ್ತು ನಾನು ಅವರ ಅಂಗಡಿಗೆ ಹೋಗುತ್ತೇನೆ ಎಂದರೆ ನಿಜ. ಚಾಸಾ ೧ ಮತ್ತು ೩ ರವರು ಒಂದೇ ಊರಿನವರಾಗಿದ್ದು, ಅಕ್ಕ-ಪಕ್ಕದ ಮನೆಯ ವಾಸಿಗಳು ಎಂದರೆ ನಿಜ. ನಿಪಿ ೨ ನ್ನು ಬರೆಯಲು ನಾನು ಮಾಹಿತಿ ಕೊಟ್ಟಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ನಾನು ಅದಕ್ಕೆ ಸಹಿ ಮಾಡಿದೆ ಎಂದರೆ ನಿಜ. ನಿಪಿ ೩ ಫೋಟೋವನ್ನು ಯಾಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತುಪಡಿಕೊಂಡಿಲ್ಲ, ನಿಪಿ ೨ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ ೧ ನನ್ನ ಪರಿಚಯಸ್ಥರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ ೩ ನ್ನು ಸ್ಥಳದಲ್ಲಿ ತೆಗೆದಿಲ್ಲ, ಅದನ್ನು ಪೋಲಿಸರು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.